ಕಲ್ಯಾಣ ಕಿರಣ

ಸೆಪ್ಟೆಂಬರ್ -2011

ಬೆಲೆ-10/-



ಪೂಜ್ಯ ಶ್ರೀ ಜಗದ್ಗುರು ಗಂಗಾಮಾತಾಜಿಯವರ ವರ್ಧಂತಿ ಆಚರಣೆ



ಉದ್ಘಾಟನೆ: ಶರಣ. ಎನ್. ಪುಟ್ಟರುದ್ರ, ಗೌ. ಅಧ್ಯಕ್ಷರು, ಲಿಂಗಾಯತ ಧರ್ಮ ಮಹಾಸಭಾ



ಧಾರವಾಡದ ರಾಷ್ಟ್ರೀಯ ಬಸವ ದಳದವರಿಂದ ಅಣ್ಣ ಹಜಾರೆಯವರ ಬೆಂಬಲಿಸಿ
ಪಥ ಸಂಚಲನ ಹಾಗೂ ಉಪವಾಸ ಸತ್ಯಾಗ್ರಹ







ದಿ.1-9-2011 ರಂದು ಧಾರವಾಡದ ಬಸವ ಜ್ಯೋತಿ ಸಮಾರೋಪ ಸಮಾರಂಭದಲ್ಲಿ
ಪೂಜ್ಯ ಮಾತಾಜಿಯವರಿಗೆ ಶರಣ-ಶರಣೆಯರಿಂದ ಗೌರವಾರ್ಪಣೆ

ಸಂಪುಟ-41	ಬಸವ ಶಕೆ -878	ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-09	ಸೆಪ್ಟೆಂಬರ್- 2011	ವಾರ್ಷಿಕ ಚಂದಾ 100 ರೂ.

ವಚನ ಪಿತಾಮಹ

ಹರುಕು ಬಟ್ಟೆ ಮುರುಕು ಮನೆ
ನಿರಾಭಾರಿ ಫಕೀರನು
ಹಿಡಿದ ಹಟ ಬಿಡದೆ ಸಾಧಿಪ
ಛಲದಂತೆ ಮಲ್ಲನು.

ಹಳ್ಳಕೊಳ್ಳ ಹತ್ತಿ ಸುತ್ತಿ
ಮಠ ಮಂದಿರ ಹೊಕ್ಕು ಹುಡುಕಿ
ಶರಣವಚನ ಕಟ್ಟುಗಳಿಗೆ
ಮರುಹುಟ್ಟು ಕೊಟ್ಟ ಮಹಂತನು

ಚಂದನವ ಕಡಿದು ಕೊರೆದರೂ
ಕಂಪು ಸೂಸುವ ಪರಿಯಲಿ
ಬೆಟ್ಟದಷ್ಟು ಕಷ್ಟ ಸಹಿಸಿ
ಜನಸೇವೆಯ ಮಾಡಿದವನು

ಕಾಯಕಯೋಗಿ ಜ್ಞಾನದಾಸೋಹಿ
ಶಿಕ್ಷಣ ತಜ್ಞ ಸ್ಥಿತಪ್ರಜ್ಞನು
ಕನ್ನಡ ನಾಡಿನ ಚರಿತೆಯಲಿ
ನಿತ್ಯ ಶೋಭಿತ ಸೂರ್ಯನು

ವಚನಗಳನೆ ಹಾಸಿಕೊಂಡು
ವಚನಗಳನೆ ಹೊದೆದುಕೊಂಡು
ವಚನಯೋಗ ನಿದ್ರೆಮಾಡಿ
ವಚನ ಪಿತಾಮಹನೆನಿಸಿದವನು

ನಿನ್ನ ಹಾಡಿ ಹೊಗಳುವೆನೆ
ಶಬ್ದಗಳೆನಗೆ ಸಾಲವು
ನಿನ್ನ ನಡೆ ನುಡಿಗಳೆ
ನಮಗೆ ದಾರಿ ದೀಪವು

ಪ್ರವಚನ ಪಿತಾಮಹ

ಅರಿಷಡ್ವರ್ಗಗಳನ್ನು ಗೆದ್ದ
ಅನುಭಾವಿ ಮಹಂತರು
ಬಸವ ತತ್ವ ಸಾರ್ವಭೌಮ
ಸ್ವಾಮಿ ಲಿಂಗಾನಂದರು

ಶರಣ ಧರ್ಮ ರಕ್ಷಣೆಗೆ
ಹೋರಾಡಿದಿರಿ ಅನವರತ
ಸೂರ್ಯ ಚಂದ್ರರಿರುವವರೆಗೆ
ನಿಮ್ಮ ಹೆಸರು ಶಾಶ್ವತ

ಸಂಪ್ರದಾಯದ ಸಂಕೋಲೆಗಳ
ಬೇರು ಕಿತ್ತು ಎಸೆದಿರಿ
ಬಸವ ಧರ್ಮ ಪ್ರಸಾರಕೆ
ಜೀವವನು ಸವೆಸಿದಿರಿ

ಬಸವ ಪೀಠ ಕಟ್ಟಿ ನೀವು
ಬಸವ ದಳಗಳ ರಚಿಸಿದಿರಿ
ಶರಣ ಮೇಳ ನಡೆಸುತ
ಶರಣ ಸಂಸ್ಕೃತಿ ಬೆಳೆಸಿದಿರಿ

ಪ್ರವಚನಕಾಗಿ ಜೀವತೆತ್ತು
ಪ್ರವಚನ ಪಿತಾಮಹನೆನಿಸಿದಿರಿ
ಬಸವ ಸಂದೇಶ ಸಾರುತ
ಜನಮನದಲಿ ನೆಲೆಸಿದಿರಿ

- ಆರ್.ಎಸ್. ಚಾಪಗಾವಿ
ಬೆಳಗಾವಿ-16

ಕಿರಣಗನ್ನಡಿ

ಭದ್ರಾವತಿ ರಾಷ್ಟ್ರೀಯ ಬಸವ ದಳದಿಂದ ಆಹ್ವಾನ

ದಿ.11-11-2011ರಂದು ಭದ್ರಾವತಿ ರಾಷ್ಟ್ರೀಯ ಬಸವ ದಳದವರು ನೂತನವಾಗಿ ಕಟ್ಟಿಸಿರುವ "ಬಸವ ಕರುಣಾಶ್ರಯ ಬಡಮಕ್ಕಳ ಉಚಿತ ವಿದ್ಯಾರ್ಥಿ ನಿಲಯ"ದ ಕಟ್ಟಡವನ್ನು ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಸನ್ನಿಧಿಯಲ್ಲಿ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು ಬೆಳಿಗ್ಗೆ10-30ಕ್ಕೆ ಉದ್ಘಾಟಿಸುತ್ತಿದ್ದು ಈ ಸಮಾರಂಭಕ್ಕೆ ಎಲ್ಲ ಶರಣ ಬಂಧುಗಳನ್ನು ಭಾಗವಹಿಸಲು ಆಹ್ವಾನಿಸುತ್ತಿದ್ದೇವೆ.

ದಿ.12ರಂದು ನಂದಿ, ಉಡುತಡಿ, ತರೀಕೆರೆ, ಬಳ್ಳಿಗಾವಿ ಮುಂತಾದ ಶರಣರ ಸ್ಥಾನಗಳ ಸಂದರ್ಶನವಿದೆ. ಬರುವ ಆಸಕ್ತಿ ಇರುವ ಶರಣರು ಮೊದಲೇ ತಮ್ಮ ಹೆಸರುಗಳನ್ನು ತಿಳಿಸಬೇಕು. ವಾಹನಗಳನ್ನು ಗೊತ್ತು ಮಾಡಲು ಅನುಕೂಲವಾಗುತ್ತದೆ.

ಶರಣ.ಮಹಾಲಿಂಗಪ್ಪ, ಅಧ್ಯಕ್ಷರು -9902192055,
ಹೆಚ್.ಎಸ್.ಬಸವರಾಜು - 9449362934, ವೈ.ಬಸವರಾಜು -9448971997

Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10. Ph: 080-23131476, 22923736



ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ ಬಸವ ಕಲ್ಯಾಣ ಸುಕ್ಷೇತ್ರದಲ್ಲಿ ಹತ್ತನೆಯ

ಕಲ್ಯಾಣ ಪರ್ವ

2011ರ ಅಕ್ಟೋಬರ್ 09, 10 ಮತ್ತು 11 ರಂದು

ಶರಣ ಬಂಧುಗಳಿಗೆ ಶರಣು ಶರಣಾರ್ಥಿ.

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವಾಯತರೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತೆ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 24ನೆಯ ಶರಣ ಮೇಳವು ಇದೇ 2011ರ ಜನವರಿಯಲ್ಲಿ ಯಶಸ್ವಿಯಾಗಿ ಜರುಗಿದೆ. ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ. ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

"ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣ
ಬಂದು ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ
ಮರ್ತ್ಯಲೋಕವೆಲ್ಲವೂ ಭಕ್ತಿಸಾಮ್ರಾಜ್ಯವಾಯಿತು"

ಎಂದು ಬಸವಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, "ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ" ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ.1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196)ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯ ಮೇ 1, 2 ಮತ್ತು 3ರಂದು ಮೊಟ್ಟ ಮೊದಲನೆಯ ಕಲ್ಯಾಣಪರ್ವ ಸಮಾಗಮವನ್ನು ಸಂಯೋಜಿಸಲಾಗಿತ್ತು. ಜನವರಿ 14 ಇಷ್ಟಲಿಂಗದ ಪರಿಕಲ್ಪನೆ ರೂಪು ತಳೆದು ಲಿಂಗಾಯತ ಧರ್ಮವು ಸಂಸ್ಥಾಪನೆಗೊಂಡ ದಿನವಾದರೆ ಮೇ 1 ಕಾಯಕದ ದಿನ; ಕಾಯಕ ಜೀವಿಗಳಿಗೆ ಗೌರವ ಸೂಚಿಸುವ ದಿನ. "ಕಾಯಕವೇ ಕೈಲಾಸ" ಎಂಬ ದುಡಿಮೆಯ ಸೂತ್ರವನ್ನು ಸಾರಿ ದುಡಿಮೆಗೆ ದಿವ್ಯತ್ವ ನೀಡಿ, ಸಮಾಜವಾದದ ಆಧಾರ ಸ್ತಂಭವಾದ ಕಾಯಕಕ್ಕೆ ಪಟ್ಟ ಕಟ್ಟಿದ ಕ್ರಾಂತಿಪುರುಷ ಬಸವಣ್ಣನವರು ಕಾಯಕ-ದಾಸೋಹ-ಪ್ರಸಾದ ಎಂಬ ತ್ರಿತತ್ತ್ವವನ್ನು ಸಾರಿ ಜಾತಿವರ್ಣವರ್ಗರಹಿತ ಧರ್ಮ ಸಹಿತ ಕಲ್ಯಾಣ ರಾಜ್ಯವನ್ನು ಕಟ್ಟಿದುದು ಬಸವ ಕಲ್ಯಾಣದ ಪುಣ್ಯಭೂಮಿಯಲ್ಲೇ. ಕಾಯಕ ದಿನ ಮೇ ಒಂದನ್ನು ಮುಖ್ಯವಾಗಿರಿಸಿಕೊಂಡು ಪ್ರತಿ ವರ್ಷ "ಕಲ್ಯಾಣ ಪರ್ವ"ವನ್ನು ನಡೆಸಲಾಗುತ್ತಿತ್ತು. ಆರನೆಯ ಕಲ್ಯಾಣ ಪರ್ವವನ್ನು 2007ನೆಯ ಇಸವಿಯ ಮೇ1,2 ಮತ್ತು 3ರಂದು ನಡೆಸಲಾಯಿತು. ಗಾಳಿ ಮತ್ತು ಮಳೆಯ ಕಾರಣ ಸಮಯವನ್ನು ಬದಲಾಯಿಸಿ 10ನೆಯ ಕಲ್ಯಾಣ ಪರ್ವವನ್ನು 2011 ರ ಅಕ್ಟೋಬರ್ 09, 10 ಮತ್ತು 11 ರಂದು ಏರ್ಪಡಿಸಲಾಗುತಿದೆ.

ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು ಮತ್ತು ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು -ಕಲ್ಯಾಣ. ಆದರ್ಶ ಕಲ್ಯಾಣ ರಾಜ್ಯ (Welfare state) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು. ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ, ಶರಣ ಗಣವು ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ

ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು, ಭಕ್ತರು ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. ''ಪಾಷಂಡಿ ಭೂಮಿಯೊಳು ಶಿವಭಕ್ತಿಯನಾರಂಭಿಸಿ ಸಾಮರ್ಥ್ಯಮಂ ಬಿತ್ತಿ ಪ್ರತ್ಯಕ್ಷಂಗಳಂ ಬೆಳೆದು, ಗಣಪರ್ವಂಗಳ ಸುಫಲಂ ಮಾಡಲೆಂದು ಬಂದ ಕಾರಣಿಕ ಬಸವ ನಿನ್ನ ದೆಸೆಯಿಂದ ಎಮ್ಮ ಭಕ್ತಿ ಬಣ್ಣವೇರಿತು'' ಎಂದು ಹರಿಹರನು ಉದ್ಗರಿಸುತ್ತಾನೆ. ಅಂಥ ಗಣಪರ್ವವನ್ನು ಇಂದು ನೀವು-ನಾವು ಮಾಡಿ ತೋರಿಸಬೇಕಾಗಿದೆ. ಅಕ್ಟೋಬರ್ 08ರ ರಾತ್ರಿಯಿಂದ ಅಕ್ಟೋಬರ್ 12 ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆ ಮಾಡಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ)ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು	: 5000 ರೂ. ಮತ್ತು ಮೇಲೆ ಕೊಟ್ಟವರು		
2. ಪೋಷಕರು	: 2000 ರೂ. ಮತ್ತು ಮೇಲೆ ಕೊಟ್ಟವರು		
3. ದಾನಿಗಳು	: 1000 ರೂ. ಮತ್ತು ಮೇಲೆ ಕೊಟ್ಟವರು		
4. ಹಿತೈಷಿಗಳು	: 500 ರೂ	5. ಸ್ವಾಗತ ಸಮಿತಿ ಸದಸ್ಯತ್ವ	: 300 ರೂ
6. ಪ್ರತಿನಿಧಿ ಶುಲ್ಕ	: 150 ರೂ.		

ಒಂದೊಂದು ಹೊತ್ತಿನ ದಾಸೋಹ ವೆಚ್ಚ ಸಹ ಕೊಡಬಹುದು.

ಅನ್ನ ದಾಸೋಹಕ್ಕಾಗಿ ಭಕ್ತಿಪೂರ್ವಕ ಕಾಣಿಕೆಗಳನ್ನು ಶಕ್ತ್ಯಾನುಸಾರ ಕೊಡಬಹುದು.

ವಿ.ಸೂ. : ವಾರ್ಷಿಕ ಸಮಾವೇಶವಾದ ಕಲ್ಯಾಣಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು. ರಸೀತಿ ಪುಸ್ತಕ, ಕರಪತ್ರಗಳನ್ನು ಪಡೆದು ದೇಣಿಗೆ ಸಂಗ್ರಹಿಸುವವರಿಗೂ ಅವಕಾಶವಿದೆ.

ಶರಣ ಭೂಮಿ ಬಸವ ಕಲ್ಯಾಣದಲ್ಲಿ ವಿವಿಧ ಯೋಜನೆಗಳು

ಬಸವ ಧರ್ಮ ಪೀಠ (ರಿ.) ಟ್ರಸ್ಟ್ ವತಿಯಿಂದ ಬಸವ ಕಲ್ಯಾಣದಲ್ಲಿ ಶರಣ ಸಂಸ್ಕೃತಿಯ ಪುನರುತ್ಥಾನ ಮಾಡಬೇಕೆಂದು ಸಂಕಲ್ಪಿಸಿ ದಿ.21-12-2001 ರಂದು ರಾಷ್ಟ್ರೀಯ ಹೆದ್ದಾರಿ 9 ರಿಂದ ಬಸವ ಕಲ್ಯಾಣಕ್ಕೆ ಹೋಗುವ ಮುಖ್ಯರಸ್ತೆಯ ಬದಿಗೆ 3 ಎಕರೆ ಜಮೀನನ್ನು ಖರೀದಿಸಲಾಯಿತು. ಪುನಃ ಹದಿನೇಳೂವರೆ ಎಕರೆ ಖರೀದಿಸಿ ಬಸವ ಮಹಾಮನೆ ಎಂಬ ಹೆಸರಿನಲ್ಲಿ ಮಠವನ್ನು ಸ್ಥಾಪಿಸಿರುವುದೇ ಅಲ್ಲದೆ ನಿತ್ಯ ದಾಸೋಹ, ಹುಣ್ಣಿಮೆ ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದೆ. 12ನೆಯ ಶತಮಾನದ ಧಾರ್ಮಿಕ ವೈಭವ 21ನೆಯ ಈ ಶತಮಾನದಲ್ಲಿ ನಡೆಯುವಂತೆ ಕಾರ್ಯೋನ್ಮುಖವಾಗಬೇಕಾಗಿದೆ. ಅದು ಶರಣರ ಸಂಕಲ್ಪ ಕೂಡ. ಹೇಗೆಂದರೆ ಬಸವಣ್ಣನವರು ಕಲ್ಯಾಣವನ್ನು ಗಡಿಪಾರಾಗಿ ಬಿಟ್ಟು ಹೋದ 770 ವರ್ಷಗಳ ನಂತರ ನಾವು ಬರುತ್ತೇವೆ ಎಂದು ಭವಿಷ್ಯವಾಣಿ ನುಡಿದಿದ್ದಾರೆ. ಶರಣರು ಮುಕ್ತಾತ್ಮರಾದ ಕಾರಣ ಅವರು ಶರೀರಧಾರಿಗಳಾಗಿ ಬರುವುದಿಲ್ಲ; ಅವರ ಸಂದೇಶಗಳು ಪುನಃ ಪ್ರಚಾರಗೊಳ್ಳುತ್ತವೆ. ಅವರ ಸಂಕಲ್ಪಗಳು ಕಲ್ಯಾಣ ಕ್ರಾಂತಿಯಿಂದಾಗಿ ಅಪೂರ್ಣವಾಗಿ ಉಳಿದಿದ್ದವು, ಈಗ ಪೂರ್ಣಗೊಳ್ಳುವ ಕಾಲ ಬರುತ್ತದೆ ಎಂಬುದೇ ಅವರ ಸಂಕಲ್ಪದ ಮರ್ಮ. ಜಗ ಬದುಕಲಿ, ಜನ ಬದುಕಲಿ ಎಂದು ಆದಿ ಶರಣರು ವಚನಗಳನ್ನು ರಚಿಸಿದುದು ಮಾತ್ರವಲ್ಲ ವಚನ ಸಾಹಿತ್ಯವನ್ನು ನಾಶ ಮಾಡಬೇಕೆಂದು ಜಾತಿವಾದಿಗಳು ಪಣ ತೊಟ್ಟಾಗ, ತಮ್ಮ ಪ್ರಾಣವನ್ನು ಪಣಕ್ಕಿಟ್ಟು, ಹೋರಾಡಿ ವಚನ ವಾಙ್ಮಯವನ್ನು ರಕ್ಷಿಸಿದರು. ಆದಿ ಶರಣರ ಆ ಬಲಿದಾನದ ಋಣವನ್ನು ತೀರಿಸಬೇಕಾದ್ದು ಪ್ರತಿಯೊಬ್ಬ ಅನುಯಾಯಿಯ ಅಭಿಮಾನದ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ಬಸವ ಧರ್ಮ ಪೀಠ ಟ್ರಸ್ಟಿನ ಬಸವ ಕಲ್ಯಾಣ ಶಾಖೆಯಲ್ಲಿ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ. ಕಾಣಿಕೆ ನೀಡುವವರಿಗೆ ಅವಕಾಶವಿದೆ.

ಕಲ್ಯಾಣ ಪರ್ವ ಉತ್ಸವ ಸಮಿತಿ, ಬಸವ ಧರ್ಮ ಪೀಠ, ಬಸವ ಮಹಾಮನೆ, ಬಸವ ಕಲ್ಯಾಣ
-585327, ಜಿಲ್ಲೆ-ಬೀದರ್
☎:08481 -251921/252856, 9663385657, 9448732456

ಸಂಪಾದಕೀಯ: - ಮಾತಾಜಿ

1. ಬಿ.ಜೆ.ಪಿ. ಸರ್ಕಾರದ ಮೌಢ್ಯತೆ.

ಎಲ್ಲ ಪಕ್ಷಗಳಿಗಿಂತಲೂ ಮೌಢ್ಯತೆ ಬೆಳೆಸುವುದರಲ್ಲಿ ಬಿಜೆಪಿಯದು ಸಿಂಹಪಾಲು. ಉಳಿದ ಪಕ್ಷಗಳವರು ಉದಾ: ಶ್ರೀ ದೇವೇಗೌಡರು ಮೂಢನಂಬಿಕೆ, ವಾಮಾಚಾರದಲ್ಲಿ ಶ್ರೀ ಯಡೆಯೂರಪ್ಪನವರಿಗಿಂತ ಏನೂ ಕಡಿಮೆ ಇಲ್ಲ. ಆದರೆ ಅವರ ಮೂಢಾಚರಣೆಗಳು ಖಾಸಗಿಯಾಗಿರುತ್ತವೆ. ಬಿಜೆಪಿಯದು ಹಾಗಲ್ಲ ಅದು ಪಕ್ಷದ್ದು; ಇನ್ನೂ ಮುಂದುವರಿದು ಸರ್ಕಾರದ್ದೇ ಆಗಿಬಿಡುತ್ತವೆ. ಸ್ವಾತಂತ್ರ್ಯ ಬಂದು 60 ವರ್ಷಗಳಲ್ಲಿ ಸಾಧಿಸಲಾಗದ್ದನ್ನು ಮೂರು ವರ್ಷಗಳಲ್ಲಿ ಸಾಧಿಸುತ್ತೇವೆ ಎಂದು ಕೊಚ್ಚಿಕೊಳ್ಳುತ್ತಿದ್ದ ಬಿಜೆಪಿ ಎಂತೆಂತಹ ಹಗರಣಗಳಲ್ಲಿ ಭಾಗಿಯಾಗಿದೆ ಎಂಬುದು ಕನ್ನಡಿಯಷ್ಟು ನಿಚ್ಚಳವಾಗಿದೆ.

ಸುವರ್ಣ ವಾಹಿನಿಯವರು ನೀನಾ? ನಾನಾ? ಎಂಬ ಶೀರ್ಷಿಕೆಯಡಿಯಲ್ಲಿ ಒಂದು ಸಂವಾದವನ್ನು ಏರ್ಪಡಿಸುತ್ತಾರೆ. ಅಂಥ ಒಂದು ಸಂವಾದ ದಿ. 6-9-2011 ರಂದು ನಡೆಯಿತು. ಚಿತ್ರನಟಿ ಲಕ್ಷ್ಮಿಯವರು ನಡೆಸುವ ಈ ಸಂವಾದದಲ್ಲಿ ನಾನು ಅತಿಥಿಯಾಗಿ ಭಾಗವಹಿಸಿದ್ದೆ. ಜ್ಯೋತಿರ್ವಿಜ್ಞಾನ (Astronomy) ಬೇರೆ ಜ್ಯೋತಿಷ್ಯ ಶಾಸ್ತ್ರ ಬೇರೆ(Astrology). ಅದು ಒಂದು ವಿಜ್ಞಾನ ಇದು ಒಂದು ಕಲ್ಪನೆ (Fiction) ಮಾತ್ರ ಈ ಶಾಸ್ತ್ರ ನವಗ್ರಹಗಳನ್ನು ಗುರುತಿಸುತ್ತದೆ. ಈ ಅದ್ಭುತ ಬ್ರಹ್ಮಾಂಡದಲ್ಲಿ ಅಸಂಖ್ಯಾತ ಗ್ರಹಗಳಿವೆ. ನವಗ್ರಹಗಳಲ್ಲಿ ರಾಹು-ಕೇತು ಕೇವಲ ನೆರಳೇ ವಿನಾ ಅಸ್ತಿತ್ವವಿರುವ ಗ್ರಹಗಳಲ್ಲ. ಒಂದು ಮಗು ಹುಟ್ಟಿದಾಗ ಅವುಗಳು ಹೇಗೆ ಪ್ರಭಾವ ಬೀರಬಲ್ಲವು? ಹೋಗಲಿ ಬೀರುತ್ತವೆ ಎಂದುಕೊಳ್ಳೋಣ ಹುಟ್ಟಿದ ನಕ್ಷತ್ರ ಕೆಟ್ಟದಾಗಿದ್ದರೆ ಗೋದಾನ, ಭೂದಾನ, ಹಿರಣ್ಯದಾನ ಮುಂತಾಗಿ ಹೇಳುವರಲ್ಲ. ಹಾಗೆ ದಾನ ಮಾಡಿದರೆ ಆ ಗ್ರಹಗಳು ವಾಪಸ್ಸು ತಿರುಗಿ ಹೋಗಿ ಮಗುವನ್ನು ಹರಸುತ್ತವೆಯೇ? ಜ್ಯೋತಿಷ್ಯ ಶಾಸ್ತ್ರ ಕೇವಲ ಊಹಾತ್ಮಕ (Theory of Assumption) ಕಾಲವು. ಒಂದು ಪ್ರವಾಹ ನಿರಂತರವಾಗಿ ಬದಲಾಗುತ್ತದೆ. ಇದರಲ್ಲಿ ರಾಹುಕಾಲ, ಗುಳಿಕಕಾಲ, ಯಮಗಂಡ ಕಾಲ ಎಂದೆಲ್ಲ ಗುರುತಿಸುವುದು ಎಷ್ಟು ಸರಿ? ಇಪ್ಪತ್ತೈದು ಮೂವತ್ತು ವರ್ಷಗಳ ಹಿಂದೆ ಅಷ್ಟು ಪಿಡುಗು ಇರಲಿಲ್ಲ. ಈಗ ವಾಸ್ತು ಎಂಬ ಹೊಸ ಮೂಢನಂಬಿಕೆ ಹುಟ್ಟಿರುವುದಲ್ಲದೆ ವಾಸ್ತು ಸರಿ ಇಲ್ಲವೆಂದು ದೊಡ್ಡ ಬಿಲ್ಡಿಂಗ್‌ಗಳನ್ನೇ ಕೆಡವಲಾಗುತ್ತದೆ. ಇದೆಲ್ಲ ಜ್ಯೋತಿಷಿಗಳು, ವಾಸ್ತು ತಜ್ಞರೆನಿಸಿಕೊಂಡವರು ಮಾಡುವ ಶೋಷಣೆಯಲ್ಲವೆ? ಜನರಲ್ಲಿರುವ ಮೂಢತನದ ದುರ್ಬಳಕೆಯಲ್ಲವೆ?" ಎಂದು ನಾನು ಪ್ರತಿಪಾದಿಸಿದೆ.

ಬಿಜೆಪಿ ಸರ್ಕಾರಗಳು ಮೂಢನಂಬಿಕೆಗಳನ್ನು ಸಾರ್ವತ್ರಿಕಗೊಳಿಸುತ್ತಲಿವೆ. ಇದಕ್ಕೆ ಜ್ವಲಂತ ಉದಾಹರಣೆ – ಚಾಮರಾಜ ನಗರದಲ್ಲಿ ನಡೆದ 'ಅಷ್ಟಮಂಗಳಯಾಗ.' ಬ್ರಾಹ್ಮಣ ಪುರೋಹಿತ ಶಾಹಿ ಎಲ್ಲ ಮೂಢನಂಬಿಕೆಗಳನ್ನು ವೈಜ್ಞಾನಿಕವಾಗಿ ಸಮರ್ಥಿಸುವುದಲ್ಲದೆ ಆಧುನಿಕ ಪರಿಭಾಷೆಯಲ್ಲಿ ಸಮರ್ಥಿಸಿಕೊಳ್ಳಲು ಪ್ರಯತ್ನಿಸುತ್ತದೆ. 'ವೈಜ್ಞಾನಿಕ ಜ್ಯೋತಿಷ್ಯ' ಎಂದು ಕೆಲವರು ಹೇಳುವುದುಂಟು. ಹೀಗನ್ನುವುದೇ ಅಸಂಬದ್ಧ, ಕಾಂಟ್ರಾಡಿಕ್ಟರಿ ಏಕೆಂದರೆ ವಿಜ್ಞಾನ ಮತ್ತು ಜ್ಯೋತಿಷ್ಯ ಪರಸ್ಪರ ವಿರೋಧಭಾಸ ಎಂದೂ ನಾನು ನನ್ನ ಸಂವಾದದಲ್ಲಿ ಹೇಳಿದೆ. ಚಾಮರಾಜನಗರಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿಗಳು ತಮ್ಮ ಅಧಿಕಾರವನ್ನು ಕಳೆದುಕೊಳ್ಳುವರು ಎಂಬ ನಂಬಿಕೆ ಅದು ಹೇಗೋ ಹುಟ್ಟಿಕೊಂಡಿದೆ. ಇದನ್ನು ನಂಬಿರುವ ಮುಖ್ಯಮಂತ್ರಿಗಳು ಚಾಮರಾಜ ನಗರಕ್ಕೆ

ಹೋಗಲು ಹಿಂಜರಿಯುತ್ತಾರೆ. ಈ ಸರ್ಕಾರವು ಚಾಮರಾಜನಗರಕ್ಕೆ ಅಂಟಿರುವ ಈ ಶಾಪವನ್ನು ನಿವಾರಿಸಲು ಸೆಪ್ಟೆಂಬರ್ 4 ರಿಂದ ಅಷ್ಟಮಂಗಲಯಾಗವನ್ನು ಆರಂಭಿಸಿದ್ದು, ಕೇರಳದ 35ಜನ ಪುರೋಹಿತರು ಇದನ್ನು ಮಾಡಿದ್ದು ಖಂಡನಾರ್ಹ. ಭಾಸ್ಕರಾಚಾರ್ಯ ಜ್ಯೋತಿಷ್ಯ ಶಾಸ್ತ್ರ ವಿಶಾರದ. ತನ್ನ ಮಗಳ ವೈಧವ್ಯವನ್ನು ತಪ್ಪಿಸಲು ಆತನಿಗೆ ಆಗಲಿಲ್ಲ. ಪುರೋಹಿತರು ಜ್ಯೋತಿಷಿಗಳಿಗೆ ತಮ್ಮ ಭವಿಷ್ಯವೇ ತಿಳಿದಿರುವುದಿಲ್ಲ. ಮಂದಿಯ ಭವಿಷ್ಯ ಸರಿಪಡಿಸಲು ಹೋಗುತ್ತಾರೆ. ಪಂಚಾಂಗ, ಶಾಸ್ತ್ರ, ಜ್ಯೋತಿಷ್ಯ, ಭವಿಷ್ಯ, ವಾಸ್ತು ಮುಂತಾಗಿ ಹೇಳಿ ಮನೋದೌರ್ಬಲ್ಯ ಉಳ್ಳ ಜನರನ್ನು ಭಯಗ್ರಸ್ತರನ್ನಾಗಿ ಮಾಡುತ್ತಾರೆ. ಜ್ಯೋತಿಷಿಗಳನ್ನು ನಂಬಿ ಕೆಟ್ಟ ಉದಾಹರಣೆ ಶ್ರೀ ಯಡೆಯೂರಪ್ಪ. ಒಬ್ಬ ರಾಜಕೀಯ ಮುತ್ಸದ್ಧಿಯಾಗಿ ಉನ್ನತೀಕರಣ ಹೊಂದಿ ರಾಷ್ಟ್ರದಲ್ಲೇ ಹೆಸರು ಮಾಡ ಬಹುದಾಗಿದ್ದು ಅವರು ಕುಳಿತರೂ, ಎದ್ದರೂ ಜ್ಯೋತಿಷಿಗಳ ಮಾತು ನಂಬಿ, ಕುರ್ಚಿ ಮೇಲೆ ಉಗುಳಿ ಕುಳಿತು ಕುಬ್ಜರಾಗಿಬಿಟ್ಟರು. ದಕ್ಷ ಆಡಳಿತದ ಕಡೆ ಗಮನ ಕೊಡದೆ ಗುಡಿಗುಂಡಾರ, ಮಠಗಳನ್ನು ಸುತ್ತಿ ಮೂಢರೆನ್ನಿಸಿಕೊಂಡರು.

ಸಾರ್ವಜನಿಕ ದುಡ್ಡು ಸರ್ಕಾರದ್ದು, ಇದು ಏನಿದ್ದರೂ ಜನ ಹಿತಕ್ಕೆ ಬಳಕೆಯಾಗಬೇಕು. ಅದು ಬಿಟ್ಟು ಮೂಢನಂಬಿಕೆಯ ಅ(ನಿ)ಷ್ಟಮಂಗಳಯಾಗ ಮಾಡಲು ದುರ್ಬಳಕೆಯಾದುದು ಖಂಡನೀಯ.

2. ಅಪರಾಧಗಳಿಗೆ ಭಾಷೆ ಮತ್ತು ಜಾತಿಯ ಸೋಂಕು ಬೇಡ.

ಒಮ್ಮೆ ಓರ್ವ ಅಧಿಕಾರಿ ಭ್ರಷ್ಟಾಚಾರ ಪ್ರಕರಣದಲ್ಲಿ ಸಿಕ್ಕಿ ಬಿದ್ದರು. ನಂತರ ಭೇಟಿಯಾದ ನಮ್ಮ ಓರ್ವ ಭಕ್ತರ ಮುಂದೆ, "ನಾನು ಎಷ್ಟು ದಾನಧರ್ಮ ಮಾಡಿದೆ. ನನಗೆ ಕಷ್ಟ ಬಂದಾಗ (ಭ್ರಷ್ಟಾಚಾರದಲ್ಲಿ ಸಿಕ್ಕಿ ಬಿದ್ದಾಗ) ನಮ್ಮ ಸಮಾಜ ನನ್ನ ನೆರವಿಗೆ ಬರಲಿಲ್ಲ" ಎಂದು ಅಲವತ್ತುಕೊಂಡರಂತೆ. ಇದೆಷ್ಟು ವಿಚಿತ್ರ! ಇಂಥ ನಿರೀಕ್ಷೆ ಅವರು ಇಟ್ಟುಕೊಳ್ಳಬಹುದೆ? ಸಮಸ್ಯೆ ಸಾಮಾಜಿಕವಾಗಿ, ತಾತ್ವಿಕವಾಗಿ, ಸಮಷ್ಟಿಗತವಾಗಿದ್ದಾಗ, ನಾವು ತಾತ್ವಿಕವಾಗಿ ಹೋರಾಟ ಮಾಡಲು ಬರುತ್ತದೆ. ವ್ಯಕ್ತಿಯ ವೈಯಕ್ತಿಕ ಆಶೋತ್ತರಕ್ಕೆ ಸಂಬಂಧಪಟ್ಟಾಗ ಸಮಾಜ ಹೇಗೆ ಕೈ ಹಾಕಲು ಬರುತ್ತದೆ? ಅಲ್ಲದೆ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಲಂಚಗುಳಿತನ, ಅನೀತಿ, ವ್ಯಭಿಚಾರ ಮುಂತಾದ ನೇತ್ಯಾತ್ಮಕ ಸಂಗತಿಗಳಿದ್ದಾಗ ಸಮಾಜವು ಹೇಗೆ ತಾನೆ ಸಮರ್ಥಿಸಿಕೊಳ್ಳಲು ಸಾಧ್ಯ? ಹಾಗೆ ಮಾಡುವುದರಿಂದ ವ್ಯಕ್ತಿಯು ಆವರೆಗೆ ತಾನು ಗಳಿಸಿಕೊಂಡ ಮರ್ಯಾದೆಯನ್ನು ಕಳೆದುಕೊಳ್ಳಬೇಕಾಗುತ್ತದೆ. ಉದಾಹರಣೆಗೆ ದಯಾನಂದಸ್ವಾಮಿ. ಅವರ ಬಗ್ಗೆ ತೆರೆಯ ಹಿಂದೆ ಹಲವು ಆರೋಪಗಳು ಕೇಳಿ ಬರುತ್ತಿದ್ದವಾದರೂ ಶ್ರೀ ಯಡೆಯೂರಪ್ಪನವರ ವಿಷಯದಲ್ಲಿ ಬೆಂಗಳೂರು ಟೌನ್‌ಹಾಲ್‌ದ ಮುಂದೆ ಪ್ರತಿಭಟನಾ ಪ್ರದರ್ಶನ ಮಾಡಿದಾಗ ಜನರು ಬಹಿರಂಗವಾಗಿ ಆಡಿಕೊಳ್ಳುವಂತಾಯಿತು. ಆವರೆಗೂ ಜನರು ದಯಾನಂದ ಸ್ವಾಮಿ ಒಬ್ಬ ಕ್ರಾಂತಿಕಾರಿ, ಹೋರಾಟಗಾರ, ನಿಸ್ವಾರ್ಥ ಸಾಧಕ ಎಂದು ತಿಳಿದಿದ್ದವರು ಅಂದಿನಿಂದ ಶ್ರೀ ಯಡೆಯೂರಪ್ಪನವರ (ಸರ್ಕಾರದ) ಫಲಾನುಭವಿ ಇರಬಹುದು. ಆ ಹಂಗಿಗೆ ಒಳಗಾಗಿ ಅವರ ಪರವಾಗಿ ಬೀದಿಗಿಳಿದು ಕುಳಿತರು ಎಂದು ಅನ್ನುವಂತಾಯಿತು. ಅದೇ ಕಡೆ ದಯಾನಂದ ಸ್ವಾಮಿಯವರ ಚಳುವಳಿಗಳಿಗೆ ಸಹಾನುಭೂತಿ ತೋರುತ್ತಿದ್ದ ನಾನು ಮುಂದೆಂದೂ ಭಾಗವಹಿಸಲಿಲ್ಲ. ಅದರಲ್ಲೂ ಆತ ನಮ್ಮ ರಾಷ್ಟ್ರೀಯ ಬಸವ ದಳದ ಸ್ಕಾರ್ಫ ಹೊದ್ದು ಎಲ್ಲೆಲ್ಲೋ ತಿರುಗುವುದು ಕಂಡಾಗ ನಮಗೆ ಬಹಳ ಮುಜುಗರವೆನಿಸುತ್ತದೆ.

ಆ ಪ್ರದರ್ಶನದಲ್ಲಿ ಕೇಳಿ ಬಂದ ಮಾತು ಹೀಗಿದೆ. 'ಯಡೆಯೂರಪ್ಪನವರು ಲಿಂಗಾಯತರಾದ ಕಾರಣ ಅವರು ಅಧಿಕಾರಕ್ಕೆ ಬಂದ ದಿನದಿಂದ ಕಿರುಕುಳ ಕೊಡಲಾಗುತ್ತಿದೆ. ಕೆಳಗಿಳಿಸಲು ನೋಡಲಾಗುತ್ತಿದೆ.' ಈ ಆರೋಪ ಎಷ್ಟು ಸರಿ? ಒಂದು ವೇಳೆ ಅದೇ ಉದ್ದೇಶವನ್ನು ಯಾರಾದರೂ ಹೊಂದಿದ್ದರು ಎಂದುಕೊಳ್ಳೋಣ. ಆಗ ಯಡೆಯೂರಪ್ಪ ಬಹಳ ಎಚ್ಚರಿಕೆಯಿಂದ ವಿರೋಧಿಗಳ ತಂತ್ರಕ್ಕೆ ಬಲಿಯಾಗದಂತೆ ನಡೆದುಕೊಳ್ಳಬೇಕಿತ್ತು. ಅವರು ವಿಧಾನ ಸೌಧದಲ್ಲಿ ಕುಳಿತು ಚಿಂತನೆ ಮಾಡಿದ್ದಕ್ಕಿಂತ ಗುಡಿ, ಮಠ ಸುತ್ತಿದ್ದೇ ಹೆಚ್ಚು.

ಈಗ ಎರಡು ಪ್ರಸಂಗಗಳು ಕಣ್ಣಮುಂದಿವೆ. ದಿ|| ರಾಜೀವ ಗಾಂಧಿಯವರ ಮೂವರು ಹಂತಕರಿಗೆ ಗಲ್ಲು ಶಿಕ್ಷೆ ವಿಧಿಸಬೇಕೆಂದು ರಾಷ್ಟ್ರಪತಿ ಅನುಮತಿ ನೀಡಿದ್ದಾರೆ. ಆದರೆ ತಮಿಳು ನಾಡು ವಿಧಾನ ಸಭೆಯಲ್ಲಿ ಒಮ್ಮತದ ಒಂದು ನಿರ್ಣಯ ಮಾಡಿ ಹಂತಕರಿಗೆ ಗಲ್ಲುಶಿಕ್ಷೆ ತಪ್ಪಿಸಬೇಕೆಂದು ಹೇಳಿ ಈ ನಿರ್ಣಯವನ್ನು ಕೇಂದ್ರಕ್ಕೆ ಕಳಿಸಲಾಗಿದೆ. ಇದು ಅನ್ಯಾಯವಲ್ಲವೆ? ಹಂತಕರು ತಮಿಳರು ಎಂಬ ಅಂಧ ಭಾಷಾಭಿಮಾನದಿಂದ ಈ ರೀತಿ ನಿರ್ಣಯಿಸಿದ್ದು ತಪ್ಪಲ್ಲವೇ? ಸಣ್ಣ ವಯಸ್ಸಿನ, ನಗೆ ಮೊಗದ, ಉಜ್ವಲ ಭವಿಷ್ಯವಿದ್ದ ಒಬ್ಬ ಪ್ರತಿಭಾವಂತ ಪ್ರಧಾನಿಯನ್ನುನು ನಿರ್ದಯವಾಗಿ ಅಮಾನುಷವಾಗಿ ಕೊಂದ ಹಂತಕರನ್ನು ಇಷ್ಟು ದಿನ ಸಾಕಿದ್ದಲ್ಲದೆ ಇನ್ನೂ ಅವರಿಗೆ ಜೀವದಾನ ಮಾಡಬೇಕೆ? ದಯವಿಲ್ಲದ ಆ ಕ್ರೂರಿಗಳಿಗೆ ಕ್ಷಮಾದಾನ ಅರ್ಥವಿಲ್ಲದ್ದು. ತಮಿಳು ನಾಡು ವಿಧಾನಸಭೆಯ ನಿರ್ಣಯ ಖಂಡನಾರ್ಹ. ಇದೇ ದಾರಿಯಲ್ಲಿ ಕಾಶ್ಮೀರದ ಮುಖ್ಯಮಂತ್ರಿಯೂ ಸಾಗಿದ್ದಾರೆ. ಸಂಸತ್ ಭವನದ ಮೇಲೆ ದಾಳಿ ಮಾಡಿದ ಸಂಚಿನ ರೂವಾರಿ ಅಪ್ಜಲ್‌ಗುರುವಿನ ಬಗ್ಗೆ ಸಹಾನುಭೂತಿ ಹೊಂದಿದ್ದಾರೆ. ತಮಿಳು ನಾಡಿನ ನಿರ್ಣಯದಲ್ಲಿ ಭಾಷಾಂಧತೆ ಕೆಲಸ ಮಾಡಿದರೆ ಕಾಶ್ಮೀರದಲ್ಲಿ ಜಾತ್ಯಂಧತೆ ಕೆಲಸ ಮಾಡಿದೆ. ಶ್ರೀ ಪರೆಂಬದೂರಿನಲ್ಲಿ ಜೀವ ತೆತ್ತ ಪ್ರಧಾನಿ ಮತ್ತು ಅನೇಕರ ಜೀವಕ್ಕೆ ಬೆಲೆಯೇ ಇಲ್ಲವೆ? ಸಂಸತ್ ಭವನದ ದಾಳಿಯಲ್ಲಿ ಜೀವತೆತ್ತ ಅನೇಕ ವೀರಯೋಧರ ಜೀವ ಕಾಸಿಗಿಂತ ಕಡೆಯೇ? ಇವರಿಗೆಲ್ಲ ಜೀವದಾನ ಮಾಡಿದರೆ ಮುಂಬೈ ದಾಳಿಯ ನೇತಾರ ಕಸಾಬ್‌ಗೂ ಜೀವದಾನ ಮಾಡಲು ಜಾತ್ಯಂಧರು ಆಗ್ರಹ ಪಡಿಸುವರು. ಈ ಬೇಡಿಕೆ ಹೇಡಿತನದ್ದು. ಆದ್ದರಿಂದ ಕೇಂದ್ರ ಸರ್ಕಾರ ನ್ಯಾಯ ಸಮ್ಮತವಾಗಿ ನಡೆಯಬೇಕೆಂದಿದ್ದರೆ ದಿ|| ರಾಜೀವ್‌ಗಾಂದಿ ಹಂತಕರು, ಸಂಸತ್ ಭವನದ ದಾಳಿಕಾರರು, ಮುಂಬೈ ದಾಳಿಕಾರರು ಎಲ್ಲರಿಗೂ ಗಲ್ಲುಶಿಕ್ಷೆ ವಿಧಿಸಲೇಬೇಕು. ಅಂದರೆ ನ್ಯಾಯಕ್ಕೆ ಬೆಲೆ ಇರುತ್ತದೆ.

3. ಭಲೇ ಅಣ್ಣಾ!

ಅಮ್ಮ ಎಂಬ ದ್ರಾವಿಡ ಭಾಷಾ ಪದ ಎಲ್ಲೆಡೆ ಜನಜನಿತವಾಗಿತ್ತು. ಈಗ ಅಣ್ಣ ಎನ್ನುವ ಮತ್ತೊಂದು ಪದ ಇಡೀ ಭಾರತದಲ್ಲಿ ಮಾತ್ರವಲ್ಲ ಅಂತರರಾಷ್ಟ್ರೀಯವಾಗಿ ಪ್ರಚಾರಕ್ಕೆ ಬಂದಿತು. ಅಣ್ಣ ಹಜಾರೆ ಎಬ್ಬಿಸಿದ ಅಲೆ ಅಂತಹುದು. ಈಗ ಕೆಲವಾರು ತಿಂಗಳ ಹಿಂದೆ ಮಾತೆ ಜ್ಞಾನೇಶ್ವರಿ ಅವರು ಕಾರಲ್ಲಿ ಹೋಗುವಾಗ ಕೇಳಿದರು. "ನಮ್ಮ ದೇಶದ ವ್ಯವಸ್ಥೆ ಸಂಪೂರ್ಣವಾಗಿ ಕೆಟ್ಟಿದೆ. ಭ್ರಷ್ಟಚಾರ ಮಿತಿ ಮೀರಿದೆ. ಇದಕ್ಕೆ ಕೊನೆ ಇಲ್ಲವೆ?" ನಾನು ಹೇಳಿದೆ, "ಈಗಂತೂ ಏನೂ ಕಾಣುತ್ತಿಲ್ಲ. ಮಹಾತ್ಮಾಗಾಂಧೀಜಿ, ಜಯಪ್ರಕಾಶ್ ನಾರಾಯಣರಂತಹ ಧೀಮಂತ ನಾಯಕರು ಬರಬೇಕು. ಇಡೀ ದೇಶವು ಎದ್ದು ನಿಲ್ಲಬೇಕು. ಮತ್ತೊಂದು ಸ್ವಾತಂತ್ರ್ಯ ಸಂಗ್ರಾಮ ಸಂಭವಿಸಬೇಕು". ಎಂದು ಹೇಳಿದೆ. ಅದನ್ನು ಹೋಲುವಂತಹ ಒಂದು ಆಂದೋಲನ ಭಾರತ ದೇಶದಲ್ಲಿ ನಡೆದುದು ಇನ್ನೂ ಈ ದೇಶದಲ್ಲಿ ಅಂತಃಸಾಕ್ಷಿ ಎಂಬುದು ಜೀವಂತವಿದೆ ಎಂಬುದಕ್ಕೆ ಉದಾಹರಣೆಯಾಯಿತು.

ಕಳೆದ ತಿಂಗಳು ಘಟಿಸಿದ, ಶ್ರೀ ಅಣ್ಣಾ ಹಜಾರೆಯವರ ನೇತೃತ್ವದಲ್ಲಿ ದೆಹಲಿಯ ರಾಮಲೀಲಾ ಮೈದಾನದಲ್ಲಿ ನಡೆದ ಶಾಂತಿಯುತವಾದ ಪ್ರತಿಭಟನೆಗೆ ದೇಶದಾದ್ಯಂತ ಉತ್ತೇಜನ, ಬೆಂಬಲ ಕಂಡು ಬಂದಿತಲ್ಲದೆ ಇಡೀ ದೇಶವೇ ಅದಕ್ಕೆ ಸ್ಪಂದಿಸಿತು. ಇದು ಭ್ರಷ್ಟಾಚಾರ ವಿರೋಧಿ ಹೋರಾಟವಾಗಿತ್ತು. ಕಳೆದ ಹಲವು ದಶಕಗಳಲ್ಲಿಯೇ ಮೊದಲ ಬಾರಿಗೆ ಸಾಮಾಜಿಕ ಕಾರಣಕ್ಕಾಗಿ ಇಡೀ ರಾಷ್ಟ್ರವು ಒಂದೇ ವೇದಿಕೆಯಡಿ ಸೇರಿದ್ದು ಒಂದು ಪವಾಡ ಸದೃಶ ಘಟನೆ. ಪ್ರಬಲ ಜನ ಲೋಕಪಾಲ ಮಸೂದೆಗಾಗಿ ಅಣ್ಣಾ ಹಜಾರೆಯವರು ನಡೆಸಿದ ಆಂದೋಲನದ ತೀವ್ರತೆಗೆ ಕೇಂದ್ರ ಸರ್ಕಾರ ಮತ್ತು ಸಂಸತ್ ಮಣಿಯಲೇ ಬೇಕಾಯಿತು.

ನಮ್ಮ ದೇಶದಲ್ಲಿ ಮಿತಿಮೀರಿದ ಭ್ರಷ್ಟಾಚಾರದಿಂದಾಗಿ ಶ್ರೀ ಸಾಮಾನ್ಯರ ಬದುಕು ಸಂಕಷ್ಟಕ್ಕೆ ಸಿಕ್ಕಿ ಹಣದ ಪ್ರಭಾವದ ಮುಂದೆ ಕಾನೂನು ದುರ್ಬಲವಾಗಿದೆ ಎಂಬ ಭಾವವು ಸಾರ್ವತ್ರಿಕವಾಗಿದೆ. ಮಾಜಿ ಮುಖ್ಯಮಂತ್ರಿದ್ವಯರ ಮೇಲಿನ ಕ್ರಮ, ಜನಾರ್ಧನ ರೆಡ್ಡಿಯಂತಹ ಗಣಿಧಣಿಯ ಮೇಲಿನ ಕ್ರಮ ನಮ್ಮ ದೇಶದಲ್ಲಿ ನ್ಯಾಯಾಂಗವಿದೆ. ಕಾನೂನು ಕೆಲಸ ಮಾಡುತ್ತದೆ. ಎಂಬ ಭರವಸೆಯನ್ನು ಮೂಡಿಸಿದೆ. ಪ್ರಬಲ ಲೋಕಪಾಲ ಮಸೂದೆಯು ಭ್ರಷ್ಟಾಚಾರ ವಿರೋಧಿ ಹೋರಾಟಕ್ಕೆ ನೆರವಾಗುವುದೆ? ಎಂಬ ಪ್ರಶ್ನೆ ಹಲವರದು. ಈ ಚಳುವಳಿ ಒಂದು ಆರಂಭ ಮಾತ್ರ ಮುಂದೆ ಇದರ ಪರಿಣಾಮ ಗೋಚರವಾಗುವುದು.

ಬೆಂಗಳೂರಿನಲ್ಲಿ ಮಾಜಿ ಲೋಕಾಯುಕ್ತ ಶ್ರೀ ಸಂತೋಷ ಹೆಗಡೆಯವರು ಮತ್ತು ಹಿರಿಯ ಸ್ವಾತಂತ್ರ್ಯ ಹೋರಾಟಗಾರ ದೊರೆಸ್ವಾಮಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ಅಣ್ಣಾ ಹಜಾರೆಯವರನ್ನು ಬೆಂಬಲಿಸುವ ಚಳುವಳಿ ನಡೆಯಿತು. ಅನಾರೋಗ್ಯದ ನಿಮಿತ್ತ ನಾನು ವೈಯಕ್ತಿಕವಾಗಿ ಭಾಗವಹಿಸಲಿಲ್ಲವಾದರೂ ರಾಷ್ಟ್ರೀಯ ಬಸವ ದಳದವರು ಭಾಗವಹಿಸಿದರು. ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳು ಸ್ವತಃ ಉಪವಾಸದಲ್ಲಿ ನಿರತರಾದರು. ಚಳುವಳಿ ಅಂತ್ಯವಾದ ಮೇಲೆ ಸ್ವತಃ ಸಂತೋಷ ಹೆಗಡೆಯವರೇ, ಪೂಜ್ಯ ಸ್ವಾಮಿಗಳಿಗೆ ಮತ್ತಿತರಿಗೆ ಎಳೆನೀರು ಕುಡಿಸಿ ಉಪವಾಸ ಅಂತ್ಯಗೊಳಿಸಿದರು.

ಈ ಅಹಿಂಸಾತ್ಮಕ ಹೋರಾಟ ಒಂದು ಬಗೆಯ ದಿಕ್ಸೂಚಿಯಾಯಿತು. ಒಬ್ಬ ನಿಸ್ವಾರ್ಥ, ಪ್ರಾಮಾಣಿಕ ಹೋರಾಟಗಾರ ರಾಷ್ಟ್ರೀಯ ಹಿತಾಸಕ್ತಿಯಿಂದ ಜನಪರ ಕಾಳಜಿಯಿಂದ ಕರೆ ಕೊಟ್ಟರೆ ಇಡೀ ದೇಶವೇ ಅದಕ್ಕೆ ಸ್ಪಂದಿಸಬಲ್ಲುದು ಎಂಬುದನ್ನು ಈ ಚಳುವಳಿ ಸ್ಪಷ್ಟಪಡಿಸಿತು. ಅಂತಃಸಾಕ್ಷಿಯನ್ನು ಬಡಿದೆಬ್ಬಿಸಿದ ಶ್ರೀ ಅಣ್ಣಾ ಹಜಾರೆ ಅವರಿಗೆ ಜಯಕಾರ ಹಾಕೋಣ. ಇಷ್ಟೆಲ್ಲ ಸಂತಸದ ನಡುವೆಯೂ ಕೇಳಿ ಬಂದ ಅಪಸ್ವರವೆಂದರೆ, "ಈ ಚಳುವಳಿಯ ಹಿಂದೆ ಬಿಜೆಪಿ, ಆರ್.ಎಸ್.ಎಸ್‌ಗಳ ಕೈವಾಡವಿದೆ. ಯಾರೂ ಬೂರ್ಜ್ವಾಗಳೋ ಕರಗಳ್ಳರೋ ಸರ್ಕಾರಕ್ಕೆ ಲೆಕ್ಕ ಕೊಡದವರೋ ಅವರೇ ಭ್ರಷ್ಟಾಚಾರ ವಿರೋಧಿ ಆಂದೋಲನದಲ್ಲಿದ್ದಾರೆ. ಅಣ್ಣಾ ಹಜಾರೆ ಮುಗ್ಧರು ಅವರ ಮುಖವಾಡದ ಹಿಂದೆ ಕಾಂಗ್ರೆಸ್ ವಿರೋಧಿ ಹೋರಾಟವಿದೆ."

ಅದೇನೇ ಇರಲಿ. ರಾಜಕೀಯಕ್ಕೆ ಹೊರತಾದ ನಮ್ಮಂತಹವರಿಗೆ ಅಣ್ಣಾ ಹಜಾರೆ ಒಂದು ದಾರಿದೀಪ!

ಭಾಗ -35 - ಮಾತಾಜಿ

ಬಸವ ವಚನಾಮೃತ

607. ಭಕ್ತಹೀನರ ದಾಸೋಹ ಸೇವ್ಯವಲ್ಲ

ಭಕ್ತಿಹೀನನ ದಾಸೋಹವ ಸದ್ಭಕ್ತರು ಸವಿಯರು;
ಬೇವಿನ ಹಣ್ಣು ಕಾಗೆಗೆ ಸವಿಯಲ್ಲದೆ ಕೋಗಿಲೆಗೆ ಮೆಲಬಾರದು
ಲಿಂಗಸಂಬಂಧವಿಲ್ಲದವರ ನುಡಿ
ಲಿಂಗದೇವನ ಶರಣರಿಗೆ ಸಮನಿಸದು. -ಬ.ವ.ದೀ. 605

ಕೆಲವು (ಶ್ರೀಮಂತರು) ಜನರು ಭಕ್ತಿ ಇಲ್ಲದೆ ಯಾಂತ್ರಿಕವಾಗಿ ದಾಸೋಹ ಮಾಡುವರು. ಮಡುವಾಗ ತಾವು ಅಹಂಭಾವ ತೋರಿಸುತ್ತ ಮಾಡುವರು. ಇದು ನಿಜವಾದ ಸದ್ಭಕ್ತರಿಗೆ ಇಷ್ಟವಾಗದು. ಬೇವಿನ ಹಣ್ಣು ಕಾಗೆಗೆ ಸವಿಯಪ್ಪುದಲ್ಲದೆ ಕೋಗಿಲೆಗಲ್ಲ ಅಂಥವರ ಮನೆಯ ಉಪಚಾರ ಅಹಂಭಾವವುಳ್ಳ ಶ್ರೀಮಂತರಿಗೇ ಸಹ್ಯವಾಗುವುದು. ನಿಜವಾದ ಸದ್ಭಕ್ತರಿಗೆ ಬಡವರ ಮನೆಯ ಆತಿಥ್ಯವಾದರೂ ಚಿಂತೆಯಿಲ್ಲ ಭಕ್ತಿ, ಆತ್ಮೀಯತೆ ಇದ್ದಾಗ ಮಾತ್ರ ಸಹ್ಯವಾಗುವುದು.

ದೀಕ್ಷೆಯನ್ನು ಪಡೆದು ಲಿಂಗಾಯತರಾದ ಬಳಿಕ ದೀಕ್ಷಾವಂತರಲ್ಲದವರೊಡನೆ ವ್ಯವಹರಿಸ ಬಾರದು. ಲಿಂಗದೇವನ ಶರಣರಿಗೆ ಅಂಥ ಸಂಬಂಧ ಇಷ್ಟವಾಗದು.

608. ಆಡಿಕೊಳ್ಳುವವರಿಗೆ ಕಿವಿಗೊಡಬಾರದು

ಬಂದು ಬಲ್ಲಹ ಬಿಡಲು ಹೊಲೆಗೇರಿ ಎಂಬ ಹೆಸರೊಳವೆ, ಅಯ್ಯಾ?
ಲಿಂಗವಿದ್ದವರ ಮನೆ ಕೈಲಾಸವೆಂದು ನಂಬಬೇಕು.
ಲೋಕದ ಡಂಬಕರ ಮಾತು ಬೇಡ,
ಲಿಂಗದೇವನಿದ್ದುದೇ ಕೈಲಾಸ
ಬ.ವ.ದೀ. 606

ಹೊಲೆಗೇರಿ ಹೆಸರಿರುವುದರಿಂದ ಒಮ್ಮೆ ಹೋಗುವುದು ಮತ್ತೊಮ್ಮೆ ಬಿಡುವುದು ಸರಿಯೆ? ತತ್ವ ತಿಳಿದುಕೊಂಡು, ಲಿಂಗಧಾರಿಗಳಾದ ಶರಣರು ಇರುವುದೇ ಪವಿತ್ರ ತಾಣ ಎಂದು ಭಾವಿಸಿ ದಲಿತ ಶರಣರ ಮನೆಗೆ ಒಮ್ಮೆ ಹೋಗುವುದು. ಇನ್ನೊಮ್ಮೆ ಮಡಿವಂತ ಜನರು ಆಡಿಕೊಂಡರೆಂದು ಬಿಡುವುದು ಸರಿಯೆ? ಇಷ್ಟಲಿಂಗವಿದ್ದ ಶರಣರ ಮನೆಯೇ ಕೈಲಾಸ ಎಂದು ನಂಬಬೇಕು. ಲೋಕದ ಡಾಂಭಿಕರ ಮಾತು ಬೇಡ. ಅವರು ಅಜ್ಞಾನಿಗಳು, ಸಂಕುಚಿತ ಮನದವರು - ಇಷ್ಟಲಿಂಗಧಾರಣೆ ಇದ್ದುದೇ ಕೈಲಾಸ. ಅಂಥವರ ಮನೆಗೆ ಹೋಗಬೇಕಾದುದು ಶರಣರ ಕರ್ತವ್ಯ!

609. ಇಷ್ಟಲಿಂಗವೇ ಗುರುತಿನ ಚೀಟಿ

ಲಿಂಗವಿಲ್ಲದೆ ನಡೆವವರ, ಲಿಂಗವಿಲ್ಲದೆ ನುಡಿವವರ -
ಲಿಂಗವಿಲ್ಲಡೆ ಉಗುಳ ನುಂಗಿದಡೆ ಅಂದಂದಿಗೆ ಕಿಲ್ಬಿಷವಯ್ಯಾ-

ಏನೆಂಬೆ ಏನೆಂಬೆನಯ್ಯಾ?
ಲಿಂಗವಿಲ್ಲದೆ ನಡೆವವರ ಅಂಗ ಲೌಕಿಕ: ಮುಟ್ಟಲಾಗದು!
ಲಿಂಗವಿಲ್ಲದೆ ನುಡಿವವರ ಶಬ್ದ ಸೂತಕ : ಕೇಳಲಾಗದು!
ಲಿಂಗವಿಲ್ಲದೆ ಗಮಿಸಿದಡೆ ಆ ನಡೆನುಡಿಗೊಮ್ಮೆ ವ್ರತಗೇಡಿ,
ಲಿಂಗದೇವಾ!

-ಬ.ವ.ದೀ. 607

ಗುರು ಬಸವಣ್ಣನವರು ಇಷ್ಟಲಿಂಗವನ್ನು ಗಣಲಾಂಛನ(Community Symbol)ವನ್ನಾಗಿ ಮಾಡಿದರು. ಇವತ್ತು ಕೆಲವು ಕಂಪೆನಿಗಳನ್ನು ಪ್ರವೇಶಿಸಲು ಹೇಗೆ ಗುರುತಿನ ಚೀಟಗಳನ್ನು, ಸ್ಮಾಟ್‌ಕಾರ್ಡ್ ಎಂದು ಮಾಡಿರುತ್ತಾರೋ ಅದೇ ರೀತಿ ಇಷ್ಟಲಿಂಗವು ಪ್ರವೇಶ ಪತ್ರ(Entrance Card) ವಾಗಿತ್ತು. ಎಲ್ಲ ವ್ಯವಹಾರಕ್ಕೂ ಅದೇ ಮುಖ್ಯ ಲಾಂಛನವಾಗಿತ್ತು. ಇಷ್ಟಲಿಂಗವಿಲ್ಲದೆ ಅರೆಕ್ಷಣವೂ ಇರಬಾರದೆಂಬ ನೇಮವನ್ನು ಹಾಕಿದ್ದರು. (ಹೆಣ್ಣು ಮಕ್ಕಳು ತಾಳಿ ಇಲ್ಲದೆ ಅರೆಕ್ಷಣವೂ ಇರುವುದಿಲ್ಲ. ದಾರ ಕಿತ್ತರೆ ಅದನ್ನು ಪೋಣಿಸಿ ಹಾಕಿಕೊಳ್ಳುವವರೆಗೆ ಊಟವನ್ನೂ ಮಾಡುತ್ತಿರಲಿಲ್ಲ. (ಈಗೀಗ ಆ ನಿಷ್ಠೆಯೂ ಇಲ್ಲ. ನಾಲ್ಕಾರು ತಾಳಿ ಸರ ಇಟ್ಟುಕೊಂಡು ಮ್ಯಾಚಿಂಗ್ ಸಲುವಾಗಿ ಬದಲಾಯಿಸುತ್ತಾರೆ) ಲೌಕಿಕ ಗಂಡನ ಕುರುಹಾದ ತಾಳಿಗೆ ಇಷ್ಟು ಮಹತ್ವ ಇರುವಾಗ ಪಾರಲೌಕಿಕ ಪತಿ ಲಿಂಗದೇವನ ಕುರುಹಿಗೆ ಎಷ್ಟು ಮಹತ್ವ ಕೊಡಬೇಕು! ಒಮ್ಮೆ ಹೀಗೆ ಶಿವದಾರ ಕಿತ್ತಾಗ ಅದನ್ನು ಕೊಂಡು ತಂದು ಪೋಣಿಸಿ ಇಷ್ಟಲಿಂಗ ಹಾಕಿಕೊಳ್ಳುವವರೆಗೆ ನಮ್ಮ ಮನೆಯಲ್ಲಿ ನನಗೆ ಊಟ ಕೊಟ್ಟಿರಲಿಲ್ಲ.)

ಒಮ್ಮೆ ನಮ್ಮಿಂದ ದೀಕ್ಷೆ ಪಡೆದ ಇಬ್ಬರು ಶರಣೆಯರು ಕೆಲಸದ ನಿಮಿತ್ತ ಹುಬ್ಬಳ್ಳಿಗೆ ಹೋಗಿದ್ದರು. ಕೆಲಸ ಪೂರ್ತಿಯಾಗದೆ ಅಲ್ಲೇ ಉಳಿಯಬೇಕಾಯಿತು. ಒಬ್ಬರು ವೇದಾಂತಿ ಸ್ವಾಮಿಗಳ ಆಶ್ರಮಕ್ಕೆ ಹೋಗಿ ತಂಗಿದ್ದರು. ಬೆಳಿಗ್ಗೆ ಚಹಾ ಕುಡಿಯಿರಿ, ತಿಂಡಿ ತಿನ್ನಿರಿ ಎಂದು ಸ್ವಾಮೀಜಿ ಒತ್ತಾಯಿಸಿದರು. ಇಲ್ಲ, ಸ್ನಾನ ಪೂಜೆ ಇಲ್ಲದೆ ನಾವು ಏನನ್ನೂ ತಿನ್ನುವುದಲ್ಲ, ಕುಡಿಯುವುದಿಲ್ಲ. ಎಂದಾಗ ಅವರು ಹಾಗಾದರೆ ಉಗುಳು ನುಂಗುವುದಿಲ್ಲವೆ? ಎಂದರಂತೆ. ಉಗುಳು ದೇಹದ ಒಳಗಿರುವ ವಸ್ತು. ಹೊರಗಿನ ವಸ್ತುಗಳನ್ನು ಸ್ವೀಕರಿಸುವಾಗ ಕೆಲವು ನಿಯಮಗಳನ್ನು ಪಾಲಿಸಬೇಕು. ಅದಕ್ಕಾಗಿಯೇ ಸುಪ್ರಭಾತದಲ್ಲಿ ಸ್ನಾನ-ಪೂಜೆ ಪೂರೈಸಿಕೊಳ್ಳಬೇಕೆಂಬ ನೇಮ ಹಾಕಲಾಗಿದೆ.

ಇವತ್ತಿನ ಲಿಂಗಾಯತರ ಆಚರಣೆ ಕಂಡು, ಲಿಂಗಾಯತವು ಒಂದು ಧರ್ಮವಾಗಿ ಆಚರಣೆಯಲ್ಲಿರದೆ ಜಾತಿಯಾಗಿ ವಿಕೃತಗೊಂಡಿರುವುದನ್ನು ನೋಡಿ ಗುರು ಬಸವಣ್ಣನವರ ಈ ವಚನ ಮತಾಂಧತೆಯ ವಚನ ಎನ್ನಿಸಬಹುದು. ಅಂದಿನ ದಿನಮಾನದಲ್ಲಿ ದೀಕ್ಷೆಯ ಅವಕಾಶ ಕೊಡುವುದೇ ಒಂದು ಮಹಾಭಾಗ್ಯವೆನಿಸಿತ್ತು. ಸಮಾಜದ ಬಹುಭಾಗವಾದ ಶೂದ್ರ, ಅಸ್ಪೃಶ್ಯ ಮತ್ತು ಸ್ತ್ರೀಯರಿಗೆ ಧರ್ಮ ಸಂಸ್ಕಾರವೇ ಇರಲಿಲ್ಲ. ಈ ಹಿನ್ನೆಲೆಯಲ್ಲಿ ಗುರು ಬಸವಣ್ಣನವರ ವಿಧಿ ವಿಧಾನ, ನಿಷೇಧಗಳು ಮಹತ್ವಪಡೆದುಕೊಳ್ಳುತ್ತವೆ.

610. ದೇವನ ನೆನಹು ಸರ್ವಶ್ರೇಷ್ಠ

ಇಪ್ಪತ್ತು ನಾಲ್ಕು ತಿಥಿಯಿಂದ ವೆಗ್ಗಳ,
ಗ್ರಹಣ - ಸಂಕ್ರಾಂತಿಯಿಂದ ವೆಗ್ಗಳ,
ಏಕಾದಶಿ -ವ್ಯತಿಪಾತದಿಂದ ವೆಗ್ಗಳ
ಸೂಕ್ಷ್ಮ ಶಿವಪಥವನರಿದಂಗೆ-
ಹೋಮ-ನೇಮ-ಜಪ-ತಪದಿಂದ ವೆಗ್ಗಳ,
ಲಿಂಗದೇವಾ, ನಿಮ್ಮ ಮಾಣದೆ ನೆನವಂಗೆ.

-ಬ.ವ.ದೀ. 608

ಪರಮಾತ್ಮನ ಧ್ಯಾನವೇ ಸರ್ವಶ್ರೇಷ್ಠ. ಇಪ್ಪತ್ನಾಲ್ಕು ತಿಥಿಗಿಂತ , ಗ್ರಹಣ -ಸಂಕ್ರಾಂತಿ ಆಚರಣೆಗಿಂತ, ಏಕಾದಶಿ -ವ್ಯತಿಪಾತದ ಮುಹೂರ್ತಕ್ಕಿಂತ, ಶಿವಪಥದ ಮರ್ಮವನ್ನರಿತು ದೇವನನ್ನು ನೆನೆಯುವುದೇ ಹೋಮ-ನೇಮ-ಜಪ-ತಪಕ್ಕಿಂತ ಹೆಚ್ಚಿನದು, ಫಲಕಾರಿಯಾದುದು.

611. ಶರಣರ ನುಡಿ ಅಮೃತ

ಅಶ್ವಮೇಧಯಾಗವಂತಿರಲಿ,
ಅಜಪೆಯುಪದೇಶ ಸಮಾಧಿಯಂತಿರಲಿ, ಹೋ!
ಹೋಮ-ನೇಮ-ಗಾಯತ್ರಿಯ ಜಪವಂತಿರಲಿ, ಹೋ!
ಜನಮೋಹನ ಮಂತ್ರವಂತಿರಲಿ, ಹೋ!
ಲಿಂಗದೇವನ ಶರಣರ ನುಡಿಗಡಣ ಎಲ್ಲಕ್ಕೂ ಅಧಿಕ, ನೋಡಾ!

-ಬ.ವ.ದೀ. 609

ವೈದಿಕ ಧರ್ಮವು ಯಜ್ಞ- ಯಾಗಗಳಿಗೆ ಅತೀವ ಮಹತ್ವ ಕೊಡುತ್ತದೆ. ಅಶ್ವಮೇಧ ಯಾಗವು ಹಿಂಸಾತ್ಮಕವಾದುದು. ಮೊದಲು ಒಂದು ಕುದುರೆಯನ್ನು ಗುರುತಿಸಿ ಅದನ್ನು ಮುಂದೆ ಬಿಟ್ಟು, ಅದನ್ನು ಕಟ್ಟಿ ಹಾಕಿದವರೊಡನೆ ಯುದ್ಧ ಮಾಡುವುದು. ಸುಮ್ಮನೆ ಶಾಂತವಾಗಿರುವ ದೇಶದಲ್ಲಿ ಇವರಾಗಿ (ಉದಾ-ಪಾಂಡವರು) ಕಾಲು ಕೆದರಿ ಜಗಳ ತೆಗೆಯುವಂತೆ ಕುದುರೆಯನ್ನು ಬಿಡುವುದು. ಎಲ್ಲ ಸಂಚಾರ ಮುಗಿಸಿದ ಮಲೆ ಲಕ್ಷಾಂತರ ಹಣ ವ್ಯಯಿಸಿ ಯಾಗವನ್ನು ಮಾಡಿ ಕುದುರೆಯನ್ನು ಬಲಿಕೊಡುವುದೇ ಅಶ್ವಮೇಧಯಾಗದ ಗುರಿ. ಇದಕ್ಕಿಂತಲೂ ಶ್ರೇಷ್ಠ ಶರಣರ ವಚನ. ಏಕೆಂದರೆ ಅಶ್ವಮೇಧಯಾಗದಲ್ಲಿ ಹಿಂಸೆ ಇದ್ದರೆ ಶರಣರ ವಾಣಿಯಲ್ಲಿ ಅಹಿಂಸೆಯ ಸಂದೇಶವಿದೆ.

ಅಜಪೆಯುಪದೇಶ ವೈದಿಕ ಧರ್ಮದ ಶ್ರೇಷ್ಠ ಕ್ರಿಯೆ; ಸಮಾಧಿ ಸ್ಥಿತಿಯೇ ಆತ್ಯಂತಿಕ ಸಿದ್ಧಿ. ಇದಕ್ಕೂ ಮಿಗಿಲು ಶರಣರ ನುಡಿಗಡಣ. ಏಕೆಂದರೆ ನಿರ್ವಿಕಲ್ಪ ಸಮಾಧಿಯು ಜಡ ಸಮಾಧಿ. ಶರಣರ ವಾಣಿಯಲ್ಲಿ ಚೈತನ್ಯ ಸಮಾಧಿ ಇದೆ. ವೈದಿಕ ಧರ್ಮದ ಮತ್ತೊಂದು ಕ್ರಿಯೆ ಹೋಮ -ಉಪಯುಕ್ತ ವಸ್ತುಗಳನ್ನು ಬೆಂಕಿಯಲ್ಲಿ ಹಾಕಿ ಸುಡುವಂತಹುದು. ಉಪವಾಸಾದಿ ನೇಮಗಳಂತೂ ವಿಪರೀತ. ಗಾಯಿತ್ರಿಯ ಮಂತ್ರ ಜಪ, ಜನರನ್ನು ವಶೀಕರಣ ಮಾಡಲು

ಬಳಸುವ ಜನಮೋಹನ ಮಂತ್ರ - ಈ ಎಲ್ಲಕ್ಕೂ ಮಿಗಿಲು ಲಿಂಗದೇವನ ಶರಣರ ನುಡಿಗಡಣ. ಏಕೆಂದರೆ ಇಲ್ಲಿ ಅಧ್ಯಾತ್ಮಿಕತೆ ಇದೆ, ಜನರ ಮನಸ್ಸನ್ನು ಪರಿವರ್ತನೆಗೊಳಿಸುವ ಸಮ್ಮೋಹಕತೆ ಇದೆ.

612. ಶರಣರ ಸಾಧನೆಯೇ ಹಿರಿದು

ವೇದ ಶಾಸ್ತ್ರದವರ ಹಿರಿಯರೆನ್ನೆ,
ಮಾಯಾಭ್ರಾಂತಿ ಕವಿದ ಗೀತಜ್ಞರ ಹಿರಿಯರೆನ್ನೆ!
ಇವರು ಹಿರಿಯರುಗಳೇ? ಯಾಗನಟ್ಟುವಿಗಪಾಣರು!
ಇವರಿಂದಧಿಕವ ಸಾಧಿಸುವರೇನು ಕಿರಿಯರೆ?
ಇಂತು ವಿದ್ಯೆ ಗುಣ ಜ್ಞಾನ ಧರ್ಮ ಆಚಾರ ಶೀಲಂಗಳ,
ನಮ್ಮ ಲಿಂಗದೇವನ ಶರಣರು
ಸಾಧಿಸಿದ ಸಾಧನೆಯನೆ ಸಾಧಿಸುವುದು.

-ಬ.ವ.ದೀ. 610

ಶರಣರು ಹೆಚ್ಚು ವಿದ್ಯಾವಂತರಲ್ಲ, ಶಾಸ್ತ್ರ ಪಾರಂಗತರಲ್ಲ. ಇವರು ಭಕ್ತಿ ಜೀವಿಗಳು ದೇವನಲ್ಲಿ ಅನನ್ಯವಾದ ಶರಣಾಗತ ಭಾವ ಹೊಂದಿದವರು. ಇವರನ್ನು ಕುರಿತು ಪಂಡಿತರಾದ ವೇದಶಾಸ್ತ್ರಪರಿಣತರು, ಗೀತಜ್ಞರು, ಯಾಗಬಲ್ಲಿದರು ವಿಡಂಬಿಸಿ ಇವಕ್ಕೇನು ವಿದ್ಯೆಯಿಲ್ಲ, ಶಾಸ್ತ್ರ ಜ್ಞಾನವಿಲ್ಲ ಎನ್ನುತ್ತಿದ್ದರು. ಈ ಮೂದಲಿಕೆ ಗುರು ಬಸವಣ್ಣನವರಿಗೆ ಬಹಳ ಕೋಪವನ್ನು ತರಿಸುತ್ತಿತ್ತು, ಅದಕ್ಕಾಗಿ ಅಂಥ ಶಾಸ್ತ್ರ ಪಂಡಿತರನ್ನು ಈ ರೀತಿ ವಿಡಂಬಿಸುತ್ತಾರೆ.

ವೇದ ಶಾಸ್ತ್ರಗಳಲ್ಲಿ ಪಾರಂಗತರಾದ ಪಂಡಿತರ ನಾನು ಹಿರಿಯರೆನ್ನೆ. ಭಗವದ್ಗೀತೆಯನ್ನು ಅರೆದುಕುಡಿದೂ ಮಾಯಾಭ್ರಾಂತಿ ಕವಿದವರನ್ನು ಹಿರಿಯರೆನ್ನೆ. ಇವರುಗಳೆಲ್ಲ ಹಿರಿಯರೆ? ಇವರ ತಲೆಯನ್ನು ಯಾಗ ಯಜ್ಞಗಳ ನಂಬಿಕೆ ತುಂಬಿಕೊಂಡಿದೆ. ಈ ಪಂಡಿತೋತ್ತಮರಿಗಿಂತಲೂ ಹೆಚ್ಚಿನ ಸಾಧನೆ ಮಾಡುವವರೇನು ಕಿರಿಯರೆ? ವಿದ್ಯೆ, ಗುಣ, ಜ್ಞಾನ, ಧರ್ಮ, ಆಚಾರ, ಶೀಲ ಈ ಎಲ್ಲದರಲ್ಲೂ ನಮ್ಮ ಶರಣರು ಹಿಂದುಳಿದಿಲ್ಲ. ಇದರ ಜೊತೆಗೆ ಅಧ್ಯಾತ್ಮಿಕ ಸಾಧನೆಯಲ್ಲಿ ಬಹು ಮುಂದಿದ್ದಾರೆ.

613. ದೈವ ದ್ರೋಹ ಸಲ್ಲದು.

ಹಾರುವರೆಲ್ಲರೂ ನೆರೆದು ಶೂದ್ರನ ಹಾರುವನ ಮಾಡುವಲ್ಲಿ
ನಂದಿ ಮುಖವಲ್ಲದೆ ಮಾಡಲಾಗದು;
ವಿಭೂತಿಯಲ್ಲದೆ ಮತ್ತೇನನೂ ಮಾಡಲಾಗದು;
ಭರ್ಗೋದೇವರೆಂಬ ಮಂತ್ರವಲ್ಲದೆ
ಮತ್ತೇನನೂ ಮಾಡಲಾಗದು!
ನಿಮ್ಮಿಂದ ಕುಲಜರಾಗಿ ಮತ್ತೆ ಅನ್ಯ ದೈವಕ್ಕೆರಗುವ
ಜಗದನ್ಯಾಯಿಗಳನೇನೆಂಬೆ ಲಿಂಗದೇವಾ?

-ಬ.ವ.ದೀ. 611

ಸಾಮಾನ್ಯವಾಗಿ ಶೂದ್ರನಿಗೆ ಯಾವುದೇ ಉನ್ನತೀಕರಣ ಸಾಧ್ಯವಿರಲಿಲ್ಲ. ಅನಿವಾರ್ಯ ಪ್ರಸಂಗದಲ್ಲಿ ಉದಾ: ಒಬ್ಬ ಶೂದ್ರ ಬಲಿಷ್ಠನಾಗಿ ರಾಜನಾದ ಎಂದುಕೊಳ್ಳುವ ಆಗ ಅವನ ದಂಡಕ್ಕೆ ಹೆದರಿ ಆ ಶೂದ್ರನನ್ನು ಸವರ್ಣೀಯನನ್ನಾಗಿ ಕ್ಷತ್ರಿಯನನ್ನಾಗಿ ಮಾಡುತ್ತಿದ್ದರು. ಆಗ ಮಾಡುತ್ತಿದ್ದುದೇನೆಂದರೆ ಒಂದು ಬಂಗಾರದ (ಅಥವಾ ಬೆಳ್ಳಿಯ) ನಂದಿಯನ್ನು ಮಾಡಿಸಿ ಅದರ ಬಾಯೊಳಗೆ ಶುದ್ಧೀಕರಣವಾಗುವವ ಪ್ರವೇಶಿಸಿ, ಹಿಂದೆ ಗುದದ್ವಾರದಿಂದ ಹೊರಬರ ಬೇಕಿತ್ತು. ಹೀಗೂ ಊಹೆ ಮಾಡಬಹುದು ನಂದಿಯ ಮುಖವನ್ನು ಬಂಗಾರ, ಬೆಳ್ಳಿಯಲ್ಲಿ ಮಾಡಿಸಿ ಶೂದ್ರನಿಗೆ ವಿಭೂತಿ ಧರಿಸಿ, ತಲೆಯ ಮೇಲೆ ನಂದಿ ಮುಖವನ್ನಿಟ್ಟು ಶುದ್ಧೀಕರಿಸುತ್ತಿದರು. ಶಿವಪರವಾದ ಈ ಕ್ರಿಯೆಗಳನ್ನು ಮಾಡಿ "ಭರ್ಗೋದೇವಃ" ಎಂಬ ಮಂತ್ರವನ್ನು ಹೇಳುತ್ತಿದ್ದರು.

"ಕಾಲಾನಂತರದಲ್ಲಿ ಹಾರುವರು ಶಿವನಿಷ್ಠೆಯನ್ನು ತೊರೆದು ಅನ್ಯದೈವಗಳ ಪೂಜೆಯಲ್ಲಿ ನಿರತರಾದರು. ಹೀಗೆ ನಿಮ್ಮಿಂದ ಕುಲಜರಾಗಿ ಶಿವನೇ ನಿನ್ನ ಬಿಟ್ಟು ಅನ್ಯದೇವತೆಗಳನ್ನು ಪೂಜಿಸುವ ಅನ್ಯಾಯಿಗಳಿವರು." ಆದಿ ಶಂಕರಾಚಾರ್ಯರಿಗೂ ಪೂರ್ವದಲ್ಲಿ ಎಲ್ಲರೂ ಶಿವಪೂಜಕರೇ ಇದ್ದರು. ಅವರು ಪಂಚಾಯತನ ಪೂಜೆ ಎಂದು ಅನ್ಯದೇವತೆಗಳ ಪೂಜೆಯ ಪರಿಪಾಠ ತಂದರು.

614. ಏಕದೇವ ನಿಷ್ಠೆ ಅಗತ್ಯ

ದೇವನೊಬ್ಬ, ನಾಮ ಹಲವು ?
ಪರಮ ಪತಿವ್ರತೆಗೆ ಗಂಡನೊಬ್ಬ
ಮತ್ತೊಂದಕ್ಕೆರಗಿದಡೆ ಕಿವಿ-ಮೂಗ ಕೊಯ್ಯುವನು
ಹಲವು ದೈವದ ಎಂಜಲವ ತಿಂಬುವರನೇನೆಂಬೆ
ಲಿಂಗದೇವಾ?

-ಬ.ವ.ದೀ. 612

ಈ ವಚನದ ಮೊದಲ ವಾಕ್ಯವನ್ನು ಎಲ್ಲರೂ ಅದರಲ್ಲೂ ಬಹುದೇವತಾ ಉಪಾಸಕರು ಸುಲಭವಾಗಿ, ಸಂತೋಷದಿಂದ ಬಳಸಿಕೊಳ್ಳುತ್ತಾರೆ. ಆದರಿದು ಏಕದೇವೋಪಾಸನೆಯ ಕಠೋರ ವಚನ! ದೇವನೊಬ್ಬ ನಾಮ ಹಲವು ಎಂಬುದಕ್ಕೆ : ಇಡುವುದರ ಬದಲು ಪ್ರಶ್ನಾರ್ಥಕ? ಚಿಹ್ನೆ ಹಾಕಬೇಕು. ಆಶ್ಚರ್ಯದಿಂದ ಗುರು ಬಸವಣ್ಣನವರು ಪ್ರಶ್ನಿಸುತ್ತಾರೆ. ದೇವನೊಬ್ಬ ನಾಮ ಹಲವು ಎನ್ನುವಿರಲ್ಲವೆ? ಸೃಷ್ಟಿಕರ್ತ ಲಿಂಗದೇವನು ಒಬ್ಬನೇ ದೇವ. ನಾಮವಿಲ್ಲದ ಅವನಿಗೆ ಅನಂತ ನಾಮಗಳನ್ನು ಕೊಡಬಹುದು. ಆದರೆ ಆ ನಾಮಗಳಿಗೆ ಬೇರೆ ಬೇರೆ ರೂಪಗಳಿರುತ್ತವೆಯೆ? ಬೇರೆ ಬೇರೆ, ಚಿತ್ರ ವಿಚಿತ್ರವಾದ ಆಕಾರಗಳುಳ್ಳ ರೂಪವನ್ನು ಕೊಡುವುದು ದೇವನಿಗೆ ಮಾಡುವ ಅಪಚಾರವೇ ಸರಿ.

ಪರಮ ಪತಿವ್ರತೆಯಾದ ಮಹಿಳೆ ತನ್ನ ಗಂಡನಲ್ಲಿ ಏಕನಿಷ್ಠೆಯಿಂದ ಇರುತ್ತಾಳೆ. ಪತ್ನಿಯು ಪರಪುರುಷನ ಸ್ನೇಹ ಮಾಡಿದರೆ ಅವಳ ವ್ಯಭಿಚಾರಕ್ಕಾಗಿ ಕಿವಿಮೂಗು ಕೊಯ್ಯುವ ಶಿಕ್ಷೆ ವಿಧಿಸಲಾಗುವುದು. ಅದೇ ರೀತಿ ದೇವನೂ ಶಿಕ್ಷಿಸುವನು. ಹಲವು ದೈವಗಳಿಗೆ ಎರಗಿ ಪ್ರಸಾದವೆಂದು ಹಲವು ದೈವಗಳ ಎಂಜಲವನ್ನು ತಿನ್ನುವವರಿಗೆ ಏನೆನ್ನೋಣ !

615. ಎರಡು ನಡೆ ಸಲ್ಲ

ಕರ್ತಾರನ ಪೂಜಿಸಿ ಕುಚ್ಚಿತ ದೈವಕ್ಕೆರಗುವರು
ಕತ್ತೆ ಕುದುರೆಗೆ ಹುಟ್ಟಿದ ವೇಸರನಂತೆ
ಭಕ್ತರೆಂತೆಂಬೆ, ಭೃತ್ಯರೆಂತೆಂಬೆ, ಶರಣರೆಂತೆಂಬೆನವರ?
ಎರಡುಳ್ಳ ಪ್ರಪಂಚಿಗಳ ಮೆಚ್ಚ ಲಿಂಗದೇವ.

-ಬ.ವ.ದೀ. 613

ಸೃಷ್ಟಿಕರ್ತನು, ಆತ್ಯಂತಿಕ ಶಕ್ತಿಯೂ ಆದ ಕರ್ತಾರನನ್ನು ಇಷ್ಟಲಿಂಗ ರೂಪದಲ್ಲಿ ಪೂಜಿಸುವುದಾಗಿ ಪ್ರತಿಜ್ಞೆ ಮಾಡಿ ದೀಕ್ಷೆಯನ್ನು ಪಡೆದ ನಂತರ ಕ್ಷುದ್ರ ದೈವಗಳ ಪೂಜೆ ಮಾಡುವವರು ಕತ್ತೆ ಮತ್ತು ಕುದುರೆಗಳ ಸಂಯೋಗದಿಂದ ಹುಟ್ಟಿದ ಹೇಸರಗತ್ತೆಯಂತೆ. ಇದರಿಂದ ಕುದುರೆ ಮೌಲ್ಯವನ್ನು ಕಳೆದುಕೊಳ್ಳುವಂತೆ ಶ್ರೇಷ್ಠಭಕ್ತ ಎಂಬ ಬಿರುದನ್ನು ಕಳೆದುಕೊಳ್ಳುವನು. ಇವನು ಭಕ್ತನಲ್ಲ, ಭೃತ್ಯಾಚಾರಿಯಲ್ಲ, ಶರಣನು ಮೊದಲೇ ಅಲ್ಲ. ಎರಡೂ ಬುಟ್ಟಿಯಲ್ಲಿ ಕಾಲಿಟ್ಟು ದಾಟಲು ಹೋಗುವವ ಪ್ರವಾಹದಲ್ಲಿ ಕೊಚ್ಚಿ ಹೋಗುವಂತೆ ಅಜ್ಞಾನದ ಹೊನಲಲ್ಲಿ ಈ ಭಕ್ತ ಕೊಚ್ಚಿ ಹೋಗುವನು.

616. ಪರಪುರುಷನನ್ನು ಪತಿ ಎನ್ನಬಹುದೆ?

ಕಂಡ ಕಂಡವರನೆ ಗಂಡರೆಂದೆಂಬ
ದುಂಡನೆಯನವಳ ಸಜ್ಜನೆ ಎಂದೆನ್ನಬಹುದೆ?
ಲಿಂಗಪ್ರಸಾದವನುಂಡು ಅನ್ಯದೈವಂಗಳ ಕೊಂಡಾಡುವವರ
ನಮ್ಮ ಲಿಂಗದೇವನು
ಆ ಭಂಡರಿಗೆ ಮಾಡಿದ ಹುಳುಗೊಂಡವನು !

-ಬ.ವ.ದೀ. 614

ಯಾವ ಪುರುಷನನ್ನೂ ತನ್ನ ಗಂಡ ಎನ್ನುವವಳನ್ನು ವೇಶ್ಯೆ ಎನ್ನಬಹುದಲ್ಲದೆ ಸಜ್ಜನ ಸ್ತ್ರೀ ಎನ್ನಬಹುದೆ? ಹಾಗೆ ದಿನನಿತ್ಯ ಪೂಜಿಸಿ ತೀರ್ಥ ಪ್ರಸಾದಕೊಳ್ಳುವುದು ನೇಮ. ಸೃಷಿಕರ್ತ ಲಿಂಗದೇವ ಹೊರತು ಇತರ ದೈವಂಗಳನ್ನು ಆರಾಧಿಸಿದರೆ ಇಂಥ ಬಹುದೇವತೋಪಾಸಕ ಭಂಡರಿಗೆ ಹುಳುಗಳ ಕೊಂಡ (ತಗ್ಗಿ)ಕ್ಕೆ ತಳ್ಳಿ ದೇವನು ಶಿಕ್ಷಿಸುವನು.

617. ಪಾತಿವ್ರತ್ಯದ ಭಕ್ತಿ

ನಂಬಿದ ಹೆಂಡತಿಗೆ ಗಂಡನೊಬ್ಬನೆ, ಕಾಣಿರೋ;
ನಂಬಬಲ್ಲ ಭಕ್ತಂಗೆ ದೇವನೊಬ್ಬನೆ, ಕಾಣಿರೋ
ಬೇಡ ! ಬೇಡ ! ಅನ್ಯದೈವದ ಸಂಗ ಹೊಲ್ಲ!
ಬೇಡ ! ಬೇಡ ! ಪರದೈವದ ಸಂಗ ಹೊಲ್ಲ!
ಬೇಡ! ಬೇಡ! ಅನ್ಯದೈವವೆಂಬುದು ಹಾದರ, ಕಾಣಿರೋ!
ಲಿಂಗದೇವ ಕಂಡಡೆ ಮೂಗ ಕೊಯ್ಯುವ, ಕಾಣಿರೋ!

-ಬ.ವ.ದೀ. 615

ದೃಢವಾಗಿ ನಂಬಿದ ಹೆಂಡತಿಗೆ ಗಂಡನು ಒಬ್ಬನೇ ಸರ್ವಸ್ವ. ಅವನು ಎಷ್ಟೇ ದಿವಸ ದೂರ ಹೋಗಲಿ ಅವನ ನೆನಪಿನಲ್ಲಿ ಕಾಲ ಕಳೆಯುವಳೇ ವಿನಾ ಅನ್ಯ ಪುರುಷನಿಗೆ ಮನ ಸೋಲಳು. ಹಾಗೆ, ನಂಬಬಲ್ಲ ಭಕ್ತಂಗೆ ದೇವನೊಬ್ಬನೆ! ಕೆಲವೊಮ್ಮೆ ಕಷ್ಟಗಳು, ತಾಪತ್ರಯಗಳು ಎರಗ ಬಹುದು. ಆಗ ತಟ್ಟನೆ ನಿಜ ಭಕ್ತ ಅನ್ಯದೈವವನ್ನು ಆಶ್ರಯಿಸಲು ಹೋಗುವುದಿಲ್ಲ. ತನ್ನ ಪತಿ ತನ್ನ ನಿಷ್ಠೆಯನ್ನು ಪರೀಕ್ಷಿಸುತ್ತಿದ್ದಾನೆ ಎಂದು ಪತಿವ್ರತೆಯ ಕಷ್ಟವನ್ನು ಸಹಿಸಿಕೊಳ್ಳುವಂತೆ ದೇವನು ತನ್ನ ನಿಷ್ಠೆಯನ್ನು ಪರೀಕ್ಷಿಸುತ್ತಿದ್ದಾನೆ ಎಂದು ಭಕ್ತನು ಭಾವಿಸುತ್ತಾನೆ.

ಬೇಡ, ಧೃತಿಗೆಡಬೇಡ, ಅನ್ಯದೈವದ ಸಂಗ ಮಾಡಬೇಡ, ಸೃಷ್ಟಿಕರ್ತನಲ್ಲದೆ ಇತರ ದೈವಂಗಳನ್ನು ಆರಾಧಿಸಬೇಡ. ಅನ್ಯ ದೈವದ ಸಂಗ ಭಾಕ್ತಿಕ ವ್ಯಭಿಚಾರ. ಹೇಗೆ ಲೌಕಿಕ ಪತಿ ತನ್ನ ಪತ್ನಿ ವ್ಯಭಿಚಾರ ಮಾಡಿದರೆ ಮೂಗುಕೊಯ್ಯಲು ಸ್ವತಂತ್ರನೋ ಹಾಗೆ ದೇವರು ಶಿಕ್ಷಿಸುವನು.

618. ಮೂಗ ಕೊಯ್ವ

ಊಡುವ ಉಡಿಸುವ ಗಂಡನಿದ್ದಂತೆ,
ಮಿಂಡಂಗೆ ಕಣ್ಣು ಚೆಲ್ಲುವಳ
ಕೇಡಿಂಗೆ ಬೆರಗಾದೆ ನಾನು! ಲಿಂಗದೇವನು
ಸಿಂಗಾರದ ಮೂಗ ಬಣ್ಣಿಸಿ ಹಲುದೋರಿ ಕೊಯ್ವ!

-ಬ.ವ.ದೀ. 616

ಶ್ರೀಮಂತ ಪತಿ; ಆರ್ಥಿಕವಾಗಿ ಮತ್ತು ಹೃದಯವಂತಿಕೆ ಎರಡರಲ್ಲೂ ಶ್ರೀಮಂತ. ಪತ್ನಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಾನೆ. ಬಗೆಬಗೆಯ ಭಕ್ಷ್ಯಭೋಜ್ಯಗಳನ್ನು ಉಣಿಸುತ್ತಾನೆ. ಉತ್ತಮ ಬಟ್ಟೆಗಳನ್ನು ಉಡಿಸುತ್ತಾನೆ. ಆಭರಣಗಳನ್ನು ಕೊಡಿಸುತ್ತಾನೆ. ಸಮಾಜದಲ್ಲಿ ಗಣ್ಯವ್ಯಕ್ತಿಯಾದ ಕಾರಣ ಅವನ ಹೆಂಡತಿ ಅನ್ನಿಸಿಕೊಳ್ಳುವುದೇ ಒಂದು ಗೌರವದ ವಿಷಯ. ಇಷ್ಟಿದ್ದೂ ಓರ್ವ ಹೆಂಗಸು ಕುರೂಪಿಯೂ ದರಿದ್ರನೂ ಆದ ಮಿಂಡನೊಡನೆ ಚೆಲ್ಲಾಟವಾಡಿದರೆ, ಮೋಹಿಸಿದರೆ ಅದು ಹಾಸ್ಯಾಸ್ಪದವಲ್ಲವೆ? ಆಕೆಯ ಅನಿಷ್ಟತನ ಕಂಡು ಗುರು ಬಸವಣ್ಣನವರು ಆಶ್ಚರ್ಯಪಡುವರು. ಆ ಚಂಚಲೆಯ ಕೇಡುತನಕ್ಕೆ ಅಚ್ಚರಿ ಪಡುವರು. ಕೆಟ್ಟ ನಡತೆಯ ಹೆಂಡತಿಯನ್ನು ಮೂದಲಿಸಿ, ವಿಡಂಬಿಸಿ ಗಂಡನು ಅವಳ ವ್ಯಭಿಚಾರಕ್ಕಾಗಿ ಮೂಗ ಕೊಯ್ಯುವನು. ಅದೇ ರೀತಿ ಪರಮಪತಿಯಾದ ಲಿಂಗದೇವನು ಬಹುದೇವತೋಪಾಸಕ ಭಕ್ತನನ್ನು ಶಿಕ್ಷಿಸುವನು.

619. ದಿನದ ಭಕ್ತಿ ಸಲ್ಲದು

ಅಷ್ಟಮಿ ನವಮಿ ಎಂಬ ಕಲ್ಪಿತವೇಕೊ ಶರಣಂಗೆ?
ತಪ್ಪಿತ್ತು ಗಣಪದವಿ ! ಲಿಂಗಕ್ಕೆ ದೂರ, ಜಂಗಮಕ್ಕೆ ದೂರ !
ಒಬ್ಬರಿಗಾಳಾಗಿ ಒಬ್ಬರನೋಲೈಸುವ
ನಿರ್ಬುದ್ಧಿ ಮನುಜರನೇನೆಂಬೆ, ಲಿಂಗದೇವಾ?

-ಬ.ವ.ದೀ. 617

****

ಲಿಂಗಭಕ್ತನಾದ ಲಿಂಗಾಯತಂಗೆ ದಿನಗಳ ಹೆಸರಿನ ಮೇಲೆ ಭಕ್ತಿ ಆರಾಧನೆ ಮಾಡುವ ಗೊಂದಲ ಇರಬಾರದು. ನಿತ್ಯ ಲಿಂಗಾರ್ಚಕನಾಗಿ ಸುಪ್ರಭಾತದಲ್ಲಿ ಪೂಜೆಯನ್ನು ಮಾಡಿ ಕರುಣ (ತೀರ್ಥ) ಪ್ರಸಾದವನ್ನು ಸ್ವೀಕರಿಸುವುದರಿಂದ ಲಿಂಗಾಯತನು ಎಂದಾದರೂ ಒಂದು ದಿವಸ ವಿಶೇಷ ವ್ರತವನ್ನು ಮಾಡಬೇಕಿಲ್ಲ. ಅಷ್ಟಮಿ- ಅಂದು ಲಕ್ಷ್ಮಿಯ ಪೂಜೆ, ನವಮಿ- ಅಂದು ದೇವಿಯ ಪೂಜೆ ಮುಂತಾದ ದಂದುಗವಿಲ್ಲ. ಹೀಗೆ ಮಾಡಿದರೆ ಗಣಪದವಿ ಅಂದರೆ ಸಮಾಜದ ಸದಸ್ಯತ್ವ ತಪ್ಪಿಹೋಗುವುದು. ಇವನು ತಾತ್ವಿಕವಾಗಿ ದೇವರಿಗೂ ದೂರವಾಗುವನು - ದೇವರು ಅಲ್ಲದ್ದನ್ನು ಪೂಜಿಸಿ, ಜಂಗಮಕ್ಕೆ ಅಂದರೆ ಧರ್ಮಗುರುಗಳಿಗೆ, ಸಮಾಜಕ್ಕೆ ದೂರವಾಗುವನು. (ಈ ಬಗೆಯ ಕಠೋರ ಶಿಕ್ಷೆಯನ್ನು ಮೊದಲಿನಿಂದಲೇ ಕೊಡುತ್ತ ಬಂದಿದ್ದರೆ ಲಿಂಗಾಯತ ಸಮಾಜ ಇಂದಿನಷ್ಟು ತತ್ವಭ್ರಷ್ಟವಾಗುತ್ತಿರಲಿಲ್ಲ. ಲಿಂಗಾಯತ ಮಠಾಧೀಶರೇ ಗಣಪತಿ ಪೂಜೆ, ಹೋಮ - ಹವನ ಮಾಡುವಾಗ ಅವರನ್ನೇ ಮಾದರಿ(Model)ಯಾಗಿ ಇಟ್ಟುಕೊಂಡ ಮೂಢ ಭಕ್ತರು ಬಿಡುವರೆ?)

ಒಬ್ಬ ಮಾಲಿಕನ ಬಳಿ ಸಂಬಳ ಪಡೆದು ಅವನ ಸೇವೆ ಮಾಡದೆ ಇನ್ನೊಬ್ಬರನ್ನು ಓಲೈಸುವ ಬುದ್ಧಿಹೀನ ಮನುಷ್ಯರ ಬಗ್ಗೆ ಏನು ಹೇಳುವುದು? ಹಾಗೆ ಲಿಂಗದೇವನನ್ನು ಧರಿಸಿ, ನಿಷ್ಠೆಯಿಂದಿರದೆ ಅನ್ಯ ದೇವತೆಗಳನ್ನು ಪೂಜಿಸುವವರ ಬಗ್ಗೆ ಏನು ಹೇಳುವುದು?!

620. ಪಾಪಿಗೂ ಭವಿಷ್ಯ ಉಂಟು.

ಎಲವೊ, ಎಲವೋ, ಪಾಪಕರ್ಮವ ಮಾಡಿದವನೇ,
ಎಲವೊ, ಎಲವೋ ಬ್ರಹ್ಮಹತ್ಯವ ಮಾಡಿದವನೇ,
ಒಮ್ಮೆ ಶರಣೆನ್ನೆಲವೋ !
ಒಮ್ಮೆ ಶರಣೆಂದಡೆ ಪಾಪಕರ್ಮ ಓಡುವುವು.
ಸರ್ವಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಂಗಳೈದಾವು;
ಒಬ್ಬಂಗೆ ಶರಣೆನ್ನು, ನಮ್ಮ ಲಿಂಗದೇವಂಗೆ !

-ಬ.ವ.ದೀ. 618

ಈ ವಚನವು ಮಾನವೀಯತೆಯಿಂದ ಕೂಡಿದ ಅಮರ ಸಂದೇಶವನ್ನು ನೀಡುತ್ತದೆ. ಕೆಲವು ಧರ್ಮಗಳಲ್ಲಿ ಪಾಪಿಗಳಿಗೆ ಪಶ್ಚಾತ್ತಾಪಕ್ಕೆ ಅವಕಾಶವೇ ಇಲ್ಲ, ಅವರ ಪಾಪಕ್ಕಾಗಿ ಕ್ರೂರ ಶಿಕ್ಷೆ ವಿಧಿಸಲಾಗುವುದು; ಸತ್ತ ನಂತರ ಅವರಿಗೆ ನಿತ್ಯ ನರಕ (Eternal Damnation) ಯಹೂದಿ ಧರ್ಮದಲ್ಲಿ ವ್ಯಭಿಚಾರಿಗಳಿಗೆ ಕಲ್ಲು ಹೊಡೆದು ಸಾಯಿಸುವ ಶಿಕ್ಷೆ ವಿಧಿಸಲಾಗುತ್ತಿತ್ತು. ಇಂದಿಗೂ ಕೆಲವು ಇಸ್ಲಾಂ ದೇಶಗಳಲ್ಲಿ ಆ ಧರ್ಮದ ಕಾನೂನು ಜಾರಿ ಇರುವಲ್ಲಿ ಕ್ರೂರ ಶಿಕ್ಷೆ ವಿಧಿಸಲಾಗುವುದು. ಭಾರತ ದೇಶದಲ್ಲಿ ಸಂವಿಧಾನಾತ್ಮಕ ಕಾನೂನು ಜಾರಿ ಇರುವುದರಿಂದ ಕಲ್ಲು ಹೊಡೆದು ಸಾಯಿಸುವ ಶಿಕ್ಷೆ, ಕಳ್ಳತನಕ್ಕಾಗಿ ಕೈ ಕತ್ತರಿಸುವ ಶಿಕ್ಷೆ ಮುಂತಾದವು ಜಾರಿ ಇಲ್ಲ. ಯಹೂದಿ ಧರ್ಮದ ಕೆಲವು ಕಠಿಣ, ಮತಾಂಧ ಹಾಗೂ ಕ್ರೂರ ನಿಯಮಗಳ ವಿರುದ್ಧ ಏಸು ಕ್ರಿಸ್ತನು ಬದಲಾವಣೆ ತರುವುದನ್ನು ಹೊಸ ಒಡಂಬಡಿಕೆ (New Testament)

****

ಬೈಬಲ್‌ದಲ್ಲಿ ಕಾಣುತ್ತೇವೆ. ಮೇರಿ ಎಂಬ ಓರ್ವ ಮಹಿಳೆಯು ವ್ಯಭಿಚಾರ ಮಾಡಿದ ತಪ್ಪಿಗಾಗಿ ಅವಳನ್ನು ಕಲ್ಲು ಹೊಡೆದು ಕೊಲ್ಲಲ್ಲು ಜನರು ಬೆನ್ನು ಹತ್ತಿದಾಗ ಅವಳು ಏಸುವಿನ ಪಾದದ ಬಳಿ ಬಂದು ಬೀಳುತ್ತಾಳೆ. ಆಗ ಏಸು ಅವರೆಲ್ಲರ ಕಡೆ ನೋಡಿ ಹೇಳುತ್ತಾರೆ, "ನೀವು ಯಾರೂ ಏನೊಂದು ತಪ್ಪನ್ನು ಮಾಡಿಲ್ಲವೋ ಅವರು ಮೊದಲನೆಯ ಕಲ್ಲು ಎಸೆಯಿರಿ." ಸ್ವಲ್ಪ ಹೊತ್ತು ಮೌನ. ನಂತರ ನೋಡಿದರೆ ಅವರೆಲ್ಲರು ಕಲ್ಲು ಗಳನ್ನು ಅಲ್ಲಲ್ಲೇ ಬಿಸಾಡಿ ಹೊರಟು ಹೋಗಿರುತ್ತಾರೆ. ಈ ದೃಶ್ಯವನ್ನು ಗುರು ಬಸವಣ್ಣನವರ ವಚನದಲ್ಲಿ ಕಾಣಬಹುದು.

ಒಬ್ಬ ಕಡುಪಾಪಿ ಬಂದು ದೀನನಾಗಿ ಗುರು ಬಸವಣ್ಣನವರ ಮುಂದೆ ನತಮಸ್ತಕನಾಗಿದ್ದಾನೆ. ಅವನ ಪಾಪಗಳ ತೀವ್ರತೆ ಅವನಿಗೆ ಅರಿವಾಗಿದೆ. ಆದರೆ ಅದರಿಂದ ಹೊರಬರುವ ದಾರಿ ತೋಚದೆ ಹತಾಶನಾಗಿದ್ದಾನೆ. ಅಂಥವನಲ್ಲಿ ಭರವಸೆಯನ್ನು ತುಂಬುವ ಕೆಲಸವನ್ನು ಗುರು ಬಸವಣ್ಣನವರು ಮಾಡುತ್ತಿದ್ದಾರೆ.

ನೀನು ಈವರೆಗೆ ಅದೆಷ್ಟೋ ಪಾಪ ಕರ್ಮ ಮಾಡಿರಬಹುದು. ಬ್ರಹ್ಮಹತ್ಯೆಯಂತಹ ಕಡು ಪಾಪವನ್ನೇ ಮಾಡಿರಬಹುದು. (ಬ್ರಹ್ಮಹತ್ಯೆ, ಸ್ತ್ರೀಹತ್ಯೆ, ಶಿಶುಹತ್ಯೆ ಮುಂತಾಗಿ ನಿಸ್ಸಹಾಯಕರನ್ನು ಕೊಲ್ಲುವುದು ಮಹಾನ್ ಪಾಪ ಕಾರ್ಯ ಎನಿಸಿಕೊಳ್ಳುತ್ತಿತ್ತು. ಏಕೆಂದರೆ ಇವರು ನಿಃಶಸ್ತ್ರಧಾರಿಗಳು) ಇರಲಿ. ಹತಾಶನಾಗಬೇಡ. ಪಶ್ಚಾತ್ತಾಪದಲ್ಲಿ ದಗ್ದನಾಗಿ ಒಮ್ಮೆ ಶರಣು ಎನ್ನು. ಒಮ್ಮೆ ಮನಃಪೂರ್ವಕವಾಗಿ, ಪ್ರಾಮಾಣಿಕವಾಗಿ ಪಶ್ಚಾತ್ತಾಪಪಟ್ಟು ಶರಣು ಎಂದು ದೇವನಿಗೆ ಶರಣಾದರೆ ಪಾಪವು ನಿರ್ಮೂಲನವಾಗುವುದು. ಹೊರಗಿನ ವಸ್ತುಗಳನ್ನು ಕೊಟ್ಟು ಪ್ರಾಯಶ್ಚಿತ್ತ ಮಾಡಿಕೊಳ್ಳುವುದಾದರೆ ಬಂಗಾರದ ಬೆಟ್ಟವನ್ನೇ ಕರಗಿಸಿದರೂ ಸಾಲದು. ಸೃಷ್ಟಿಕರ್ತನು, ಕರ್ಮಾಧ್ಯಕ್ಷನು, ಮುಕ್ತಿದಾತನು ಆದ ಲಿಂಗದೇವನಿಗೆ ಶರಣಾಗು, ಪಾಪ ನಿವೃತ್ತಿಯನ್ನು ಮಾಡಿಕೋ.

<u>ಪಶ್ಚಾತ್ತಾಪ ಬೇರೆ ಪ್ರಾಯಶ್ಚಿತ್ತ ಬೇರೆ</u>

ಪ್ರಾಯಶ್ಚಿತ್ತದಲ್ಲಿ ಹೊರಗಿನ ವಸ್ತುಗಳನ್ನು ಕೊಡುವುದಿರುತ್ತದೆ. ಪಶ್ಚಾತ್ತಾಪದಲ್ಲಿ ತನ್ನನ್ನು ತಾನೇ ದೇವನಿಗೆ, ಗುರುವಿಗೆ ಅರ್ಪಣೆ ಮಾಡುವುದಿರುತ್ತದೆ. ನವಗ್ರಹ ಪೂಜೆ ಮಾಡಿ ಧಾನ್ಯಗಳನ್ನು ದಾನ ಮಾಡುವುದು, ಗೋ ದಾನ, ಬೆಳ್ಳಿ - ಬಂಗಾರದ ವಸ್ತುಗಳನ್ನು ದಾನ ಮಾಡುವುದು ಇವೆಲ್ಲ ಪ್ರಾಯಶ್ಚಿತ್ತ. ಕಳ್ಳ ಹಣ ಗಳಿಸಿದವರು ಬಂಗಾರದ ಕಿರೀಟ, ಕವಚ ಮುಂತಾಗಿ ದೇವತಾ ವಿಗ್ರಹಗಳಿಗೆ ಕೊಡುವುದನ್ನು ಕಾಣುತ್ತೇವೆ. ಅಲ್ಲಿ ಭಕ್ತಿಗಿಂತ ಹೆಚ್ಚು ಪಾಪಪ್ರಜ್ಞೆಯನ್ನು ಕಾಣಬಹುದು. ಜಗನ್ಮಾತಾ ಅಕ್ಕಮಹಾದೇವಿಯ ಒಂದು ವಚನವು ಬಹು ಮಾರ್ಮಿಕವಾಗಿದೆ.

ಅನ್ನ ನೀಡುವವರಿಗೆ ಧಾನ್ಯವೆಸೆವ ಲೋಕ
ಅರ್ಥವ ನೀಡುವವರಿಗೆ ಪಾಷಾಣವೆಸೆವ ಲೋಕ
ಹೆಣ್ಣು ಹೊನ್ನು ಮಣ್ಣು ಮೂರನೂ
ಕಣ್ಣಿನಲಿ ನೋಡಿ, ಕಿವಿಯಲ್ಲಿ ಕೇಳಿ,
ಕೈಯಲ್ಲಿ ಮುಟ್ಟಿ ಮಾಡುವ ಭಕ್ತಿ
ಸಣ್ಣವರ ಸಮಾರಾಧನೆಯಾಯಿತ್ತು.

ತನ್ನನಿತ್ತು ತುಷ್ಟಿವಡೆವವರ ತೋರಾ ಎನಗೆ ಚನ್ನಮಲ್ಲಿಕಾರ್ಜುನ.

ಪ್ರಾಯಶ್ಚಿತ್ತದಲ್ಲಿ ತನ್ನದಾದ ವಸ್ತುಗಳನ್ನು ದೇವರಿಗೆ ಕೊಡುವ ಕ್ರಿಯೆ ಇದ್ದರೆ ಪಶ್ಚಾತ್ತಾಪದಲ್ಲಿ ತನ್ನನ್ನೇ ಕೊಟ್ಟುಕೊಳ್ಳುವ ಪ್ರಕ್ರಿಯೆ ಇರುತ್ತದೆ. ವ್ಯಾವಹಾರಿಕ ಧರ್ಮ (Commercial religion)ದಲ್ಲಿ ಪ್ರಾಯಶ್ಚಿತ್ತ ಪ್ರಧಾನವಾಗಿದ್ದರೆ ಅಧ್ಯಾತ್ಮಿಕ ಧರ್ಮ (Spiritual religion) ದಲ್ಲಿ ಪಶ್ಚಾತ್ತಾಪ ಮತ್ತು ಶುದ್ಧೀಕರಣ (Purgation) ಪ್ರಧಾನವಾಗಿರುತ್ತದೆ.

ಗುರು ಬಸವಣ್ಣನವರ ಈ ವಚನದಲ್ಲಿ ಮಾನವೀಯ ಮಿಡಿತವಿದೆ. ಪ್ರತಿಪಾಪಿಗೂ ಭವಿಷ್ಯವಿದೆ ಎಂಬ ಭರವಸೆ ಇದೆ. Every sinner has future. Every saint has a past ಎಂಬ ವಿವೇಕೋಕ್ತಿ ಇಲ್ಲಿ ಅಭಿವ್ಯಕ್ತವಾಗಿದೆ.

621. ಹೊಯ್ದಾಟ ತೊರೆದು ನನ್ನನ್ನು ನಂಬು

ಹಲವು ಕೊಂಬೆಗೆ ಹಾಯಲು ಬೇಡ
ಬರಿ ಕಾಯಕ್ಕೆ ನೀಡಲು ಬೇಡ,
ಲೋಗರಿಗೆಡೆಗೊಟ್ಟು ಭ್ರಮಿತನಾಗಿರಬೇಡ,
ಆಚಾರವೆಂಬುದು ಹಾವಸೆಗಲ್ಲು;
ಭಾವ ತಪ್ಪಿದ ಬಳಿಕ ಏಗೈದಡಾಗದು.
ಅಂಜದಿರು, ಅಳುಕದಿರು, ಪರದೈವಕ್ಕೆರಗದಿರು;
ಲಿಂಗದೇವನ ಕೈಯಲು ಈಸುವುದೆನ್ನ ಭಾರ !

-ಬ.ವ.ದೀ. 619

ಗುರು ಬಸವಣ್ಣನವರ ಈ ವಚನವು ಬಹು ಮಹತ್ವಪೂರ್ಣ. ಹೊಯ್ದಾಡುವ ಮನಸ್ಸಿನ ಭಕ್ತಂಗೆ ಧೈರ್ಯ ತುಂಬುವ ರೀತಿ ಅನನ್ಯವಾಗಿದೆ. ಒಮ್ಮೆ ಕ್ರೈಸ್ತ ಪಾದ್ರಿಯು ನಮಗೆ ಸವಾಲು ಹಾಕಿದ್ದರು: "ಬಸವಣ್ಣನವರು ಎನಗಿಂತ ಕಿರಿಯರಿಲ್ಲ ಎಂಬ ಕೀಳರಿಮೆ ಹೊಂದಿದ್ದರು. ಏಸುಕ್ರಿಸ್ತ ನಾನು ನಿಮ್ಮನ್ನು ಉದ್ಧರಿಸುವೆ ಎಂದು ಹೇಳುವರು." ಒಂದೊಂದು ವಚನವನ್ನು ಸೂಕ್ತ ಹಿನ್ನೆಲೆಯಲ್ಲಿ ಅರ್ಥ ಮಾಡಬೇಕು. ವಿನೀತ ಭಾವದ ಸಮಷ್ಟಿ ಪ್ರಜ್ಞೆಯ ಭೃತ್ಯಾಚಾರದ ವಚನವಾಕ್ಯವಿದು. ಇಲ್ಲಿ ಕಿಂಕರತೆ ಇದೆ ಕೀಳರಿಮೆ ಇಲ್ಲ. ಏಸುಕ್ರಿಸ್ತ "ನನ್ನನ್ನು ನಂಬಿ, ನಾನು ಉದ್ಧರಿಸುವೆ." ಎಂದು ಆತ್ಮವಿಶ್ವಾಸದಿಂದ ನುಡಿದ ಮಾತಿಗೆ ಸರಿಸಾಟಿಯಾಗುವ ಬಸವ ವಚನ ಮೇಲಿದೆ. ಅದರ ಅರ್ಥವನ್ನು ಈಗ ನೋಡೋಣ.

ಹಲವು ಕೊಂಬೆಗೆ ಹಾಯಲು ಬೇಡ : ದುರ್ಬಲ ಮನಸ್ಸಿನ ಮಾನವ ಹಲವಾರು ದಾರಿಗಳಿಗೆ ಎಳಸುವನು. ಕೋತಿ ಹೇಗೆ ಕೊಂಬೆಯಿಂದ ಕೊಂಬೆಗೆ ಹಾರುವರೋ ಹಾಗೆ ಮನ ವಿವಿಧ ಮಾರ್ಗಗಳಲ್ಲಿ ಸುಳಿಯುತ್ತದೆ. ಇದು ವ್ಯರ್ಥ ಬಳಲಿಕೆಗೆ ಕಾರಣವಾಗುತ್ತದೆ. ಇಂಥ ಹೊಯ್ದಾಟ ಬೇಡ.

ಬರಿ ಕಾಯಕ್ಕೆ ನೀಡಲು ಬೇಡ : ಕೆಲವರು ತಮ್ಮ ಶರೀರದ ಸುಖಭೋಗಕ್ಕಾಗಿ

ಲೆಕ್ಕವಿಲ್ಲದಷ್ಟು ಖರ್ಚು ಮಾಡುವರು, ದಾನ ಧರ್ಮಕ್ಕೆ ನೀಡರು. ಇನ್ನು ಕೆಲವರು ಬಂಧು ಬಳಗದ ಸುಖಕ್ಕಾಗಿ ವಿಪರೀತ ಖರ್ಚು ಮಾಡುವರು. ಇದು ಸಹಿತ ಬರಿ ಕಾಯಕ್ಕೆ ನೀಡದಂತೆ. ಮತ್ತೆ ಕೆಲವರು ಹೇಳುವರು, "ನಾವು ಬಡ ಬಗ್ಗರಿಗೆ ಮಾನವೀಯ ಕೆಲಸಕ್ಕೆ ಕೊಡುತ್ತೇವೆಯೇ ವಿನಾ ಧರ್ಮಕಾರ್ಯಕ್ಕೆ ಕೊಡುವುದಿಲ್ಲ. ಇದು ಸಹ ಬರಿ ಕಾಯಕ್ಕೆ ನೀಡಿದಂತೆ. ಜೈನ ಧರ್ಮದಲ್ಲಿ ಸಂಪತ್ತನ್ನು 3 ರೀತಿಯಲ್ಲಿ ವಿನಿಯೋಗಿಸಬೇಕೆಂದಿದೆ. ಆತ್ಮದ್ರವ್ಯ, ಧರ್ಮದ್ರವ್ಯ, ದೇವ ದ್ರವ್ಯ ಎಂಬುದಾಗಿ. ತನ್ನ ಸ್ವಂತಕ್ಕೆ ಬಳಸುವುದು ಆತ್ಮ ದ್ರವ್ಯ, ಮಾನವೀಯ ಕಾರ್ಯಕ್ಕೆ ಬಳಸುವುದು ಧರ್ಮದ್ರವ್ಯ, ದೈವೀಕಾಯಕ್ಕೆ ಬಳಸುವುದು ದೇವದ್ರವ್ಯ ಹೀಗಾಗಿಯೇ ಅವರು ದಾನಧರ್ಮ ದಲ್ಲೂ ಮುಂದು, ಧರ್ಮ ಮಂದಿರಗಳನ್ನು ಕಟ್ಟುವುದರಲ್ಲೂ ಮುಂದು.

ಲೋಗರಿಗೆಡೆಗೊಟ್ಟು ಭ್ರಮಿತನಾಗಿರಬೇಡ: ಗೆಳೆಯರು, ಬಂಧು ಮಿತ್ರರ ಆಹ್ಲಾದ ವಿನೋದ ಸುಖ ಭೋಜನಕ್ಕೆ ಹಣವನ್ನು ವ್ಯಯಿಸಿ ಅವರ ಹೊಗಳಿಕೆಯಿಂದ ಭ್ರಮೆಗೆ ಒಳಗಾಗ ಬಾರದು. ಸರ್ವಜ್ಞ ಹೀಗೆ ಹೇಳುವನು :

ಬಂಧುಗಳು ಆದವರು ಬಂದುಂಡು ಹೋಗುವರು
ಬಂಧನವ ಕಳೆಯಲರಿಯರು । ಗುರುವಿಂದ
ಬಂಧುಗಳು ಉಂಟೆ ಸರ್ವಜ್ಞ?

ಆಚಾರವೆಂಬುದು ಹಾವಸೆಗಲ್ಲು : ಆಚಾರ ಎಂಬುದು ಬಲು ಸೂಕ್ಷ್ಮ; ಅದು ಪಾಚಿ ಕಟ್ಟಿದ ಕಲ್ಲಿನಂತೆ ಬಹಳ ಬೇಗ ಜಾರಿಸುವುದು. ಊರೊಳಗೆ ಒಂದು ಮಾರಿ ಜಾತ್ರೆ ನಡೆದಿರುತ್ತೆ ಎಂದುಕೊಳ್ಳಿರಿ. ಜಾತ್ರೆಗಾಗಿ ಪಟ್ಟಿ ಎತ್ತುವರು. ಜಾತ್ರೆಯಲ್ಲಿ ಕೋಣ, ಕುರಿ, ಕೋಳಿ ಬಲಿ ಕೊಡುವರು. ಇಂಥ ಪಾಪ ಕಾರ್ಯಕ್ಕೆ ಶರಣನು ಪ್ರೋತ್ಸಾಹಿಸಬಾರದು. ಪಟ್ಟಿಕೊಡದಿದ್ದರೆ ಊರವರ ಕೋಪಕ್ಕೆ ಕಾರಣನಾಗುವನು. ಕೊಟ್ಟರೆ ಪಾಪಕಾರ್ಯದಲ್ಲಿ ಭಾಗಿಯಾಗುವನು. ಇಂಥ ಸಂದಿಗ್ಧ ಸಮಯ ಬಹಳಷ್ಟು ಒದಗುತ್ತವೆ.

ಭಾವ ತಪ್ಪಿದ ಬಳಿಕ ಏಗೈದಡಾಗದು: ಇಟ್ಟುಕೊಂಡ ನಿಷ್ಠೆಯನ್ನು ಸಡಲಿಸಿದರೆ ಪ್ರಮಾದ ಸಂಭವಿಸುವುದು. ಏನು ಮಾಡಿದರೂ ತಪ್ಪಿದ ಹೆಜ್ಜೆಯನ್ನು ಸರಿಪಡಿಸಲು ಆಗುವುದಿಲ್ಲ.

ಅಂಜದಿರು, ಅಳುಕದಿರು, ಪರದೈವಕ್ಕೆ ಎರಗದಿರು : ಎಲೈ ಭಕ್ತ ಎಲೈ ಶರಣ, ಅಂಜಬೇಡ, ಅಳುಕಬೇಡ, ಯಾರ ಒತ್ತಾಯಕ್ಕೂ ಈಡಾಗಿ ಪರದೈವಕ್ಕೆ ತಲೆಬಾಗಬೇಡ. ಮಾನಸಿಕ ಹೊಯ್ದಾಟಕ್ಕೆ ಈಡಾಗಬೇಡ.

ಲಿಂಗದೇವನ ಕೈಯಲು ಈಸುವುದೆನ್ನ ಭಾರ : ಸೃಷ್ಟಿಕರ್ತನೂ ಸರ್ವಶಕ್ತನೂ ಆದ ಲಿಂಗದೇವನ ಕೈಯಲ್ಲಿ ನಿನ್ನನ್ನು ಒಪ್ಪಿಸುವುದು ನನ್ನ ಹೊಣೆಗಾರಿಕೆ. ಆದ್ದರಿಂದ ಲಿಂಗದೇವನಲ್ಲಿ ವಿಶ್ವಾಸವಿಡು, ನನ್ನಲ್ಲಿ ವಿಶ್ವಾಸವಿಡು.

(ಮುಂದುವರಿಯುವುದು........)

ನೆನಪಿನ ಬುತ್ತಿ ಬಿಚ್ಚಿದಾಗ -3

- ಮಾತಾಜಿ

ನಮ್ಮ ತಾತ ಶಿವಣ್ಣನವರ ಮನೆಯಲ್ಲಿದ್ದಾಗ ನನಗೆ ದೊರೆತ ಮತ್ತೊಂದು ಅಮೂಲ್ಯ ಅನುಭವವೆಂದರೆ ಪ್ರಿಂಟಿಂಗ್ ಜ್ಞಾನ ಮತ್ತು ಪ್ರೂಫ್ ತಿದ್ದುವಿಕೆ. ಪ್ರೌಢಶಾಲೆಯಲ್ಲಿ ಇರುವಾಗ ಶಿವಣ್ಣ ತಾತನವರು ಒಂದು ಬೃಹತ್ ಕೆಲಸ ಕೈಗೊಂಡಿದ್ದರು. ಅದೇ ಲಾ ಜರ್ನಲ್‌ಗಳ ಸಂಪಾದನೆ ಮತ್ತು ಮುದ್ರಣ. ಬಹಳ ಶ್ರಮಪಟ್ಟು ನೂರು ವರ್ಷಗಳ (ನನಗೆ ಸರಿಯಾಗಿ ನೆನಪಿಲ್ಲ) ಹೈಕೋರ್ಟ್ ತೀರ್ಪುಗಳನ್ನು ಸಂಗ್ರಹಿಸಿ 3 ಬೃಹತ್ ಕೃತಿಗಳನ್ನಾಗಿ ರಚಿಸಿದ್ದರು. ಅವುಗಳ ಪ್ರೂಫ್ ನೋಡಬೇಕು. ಒಂದು ತಪ್ಪು ಉಳಿಯಬಾರದು ಎಂಬುದು ಅವರ ಹಂಬಲ. ಮುದ್ರಣವಾದ ಮೇಲೆ ಆಕಸ್ಮಾತ್ ಒಂದು ತಪ್ಪು ಉಳಿದರೆ ಆ ಅಕ್ಷರವನ್ನು ಮುದ್ರಿಸಿ ತಿದ್ದಿ ಅಂಟಿಸಲಾಗುತ್ತಿತ್ತು. ಇದು ಸೂಕ್ಷ್ಮ ಕೆಲಸ. ಹೈಸ್ಕೂಲ್ ವಿದ್ಯಾರ್ಥಿನಿಯಾದ ನನಗೆ ಬಲು ಇಷ್ಟವಾದ ಕೆಲಸವಾಗುತ್ತಿತ್ತು.

ವಕೀಲರಾದ ನಮ್ಮ ತಾತನ ಬಳಿ ಬರವಣಿಗೆ ಕೆಲಸ ಬಹಳ ಇರುತ್ತಿತ್ತು. ಟೈಪ್ ರೈಟರ್ ಇದ್ದರೂ ಕೆಲವೊಂದು ಪತ್ರ ಬರೆಸಲಿಕ್ಕೆ ನನ್ನ ಬರಹವನ್ನೇ ಬಳಸಿಕೊಳ್ಳುತ್ತಿದ್ದರು. ನನ್ನ ಹಸ್ತ ಬರಹ ಬಹಳ ಸುಂದರವಾಗಿ, ಸ್ಪಷ್ಟವಾಗಿ, ತಪ್ಪಿಲ್ಲದಂತೆ ಇರುತ್ತಿತ್ತು. ಬರೆಯಬೇಕಾದ್ದನ್ನು ಅವರು ಹೇಳುತ್ತಿದ್ದರು. ನಾನು ವೇಗವಾಗಿ ಬರೆದುಕೊಂಡು ನಂತರ ಛಾಪಾ ಕಾಗದದ ಮೇಲೆ ಬರೆದು ಕೊಡುತ್ತಿದ್ದೆ. ನಾನು ಬರೆದ ಪತ್ರ ನೋಡಿ, "ಅಕ್ಷರ ಮುತ್ತು ಪೋಣಿಸಿದಷ್ಟು ಸುಂದರ; ನಮ್ಮ ರತ್ನ ಬಲು ಜಾಣೆ"ಎಂದು ಮೆಚ್ಚುಗೆಯಿಂದ ಉದ್ಗರಿಸುತ್ತಿದ್ದರು. ಪ್ರಿಂಟಿಂಗ್, ಮಡಿಚುವಿಕೆ, ಬೈಂಡಿಂಗ್ ಎಲ್ಲ ಜ್ಞಾನವೂ ಮನೆಯಲ್ಲಿ ಪ್ರಿಂಟಿಂಗ್ ಪ್ರೆಸ್ ಇದ್ದ ಕಾರಣ ಆಯಿತು.

(ಮುಂದೊಮ್ಮೆ 1970ರಲ್ಲಿ ಕಲ್ಯಾಣ ಕಿರಣ ಹುಟ್ಟಿತು. ಒಂದು ಸಲ ಪ್ರಿಂಟಿಂಗ್ ಮಾಡುವವ ಕೈಕೊಟ್ಟ. ಆಗ ನಾನು ಒಬ್ಬಳೇ ಅಕ್ಷರ ಜೋಡಿಸಿ, ಮುದ್ರಿಸಿ, ಮಡಚಿ, ಬೈಂಡಿಂಗ್ ಮಾಡಿ ಪೋಸ್ಟ್ ಮಾಡಿಬಿಟ್ಟೆ. ಇದಕ್ಕೆ ಪ್ರೇರಣೆ ಮನೆಯಲ್ಲಿದ್ದಾಗ ಒದಗಿದ ಪ್ರಿಂಟಿಂಗ್ ಪ್ರೆಸ್ ಅನುಭವ. ಪೂಜ್ಯ ಅಪ್ಪಾಜಿಯವರು ನನ್ನ ಸಾಹಸವನ್ನು ಕೊಂಡಾಡಿದರು.)

ಬಾಲ್ಯದಿಂದಲೂ ಹಳ್ಳಿಯ ಜೀವನ ಬಹು ಇಷ್ಟವೆನಿಸುತ್ತಿತ್ತು. ರಜೆ ಬರುತ್ತಲೇ ಸಾಸಲಹಟ್ಟಿಗೆ ಓಡುತ್ತಿದ್ದೆವು. ಗಟ್ಟಿ ಹಾಲು, ಕೆನೆ ಮೊಸರು, ಹೆರೆತ ತುಪ್ಪ, ಎಳ್ಳು ಹಚ್ಚಿದ ಸಜ್ಜೆ ರೊಟ್ಟಿ ಇವೆಲ್ಲ ಆಕರ್ಷಣೆಯ ಕೇಂದ್ರ ಬಿಂದುಗಳು. ಸಜ್ಜೆ ರೊಟ್ಟಿ ಮೇಲೆ ಹೆರೆತ ತುಪ್ಪ-ಅದರ ಸುವಾಸನೆ ನೆನೆಸಿಕೊಂಡರೆ ಈಗಲೂ ಖುಷಿ ಎನಿಸುತ್ತದೆ, ಹಾಕಿಸಿಕೊಂಡು ತಿನ್ನುವುದು ಮಕ್ಕಳಿಗೆ ಬಲು ಹಿತವೆನಿಸುತ್ತಿತ್ತು. ನಾನು ಹುಟ್ಟಿದ ಮನೆ ಅದು. ವೀರಮ್ಮ - ತಂದೆ ಡಾ॥ಬಸಪ್ಪನವರ ಅಕ್ಕ, ನಮ್ಮ ತಾಯಿಯ ದೊಡ್ಡಮ್ಮ, ಅವರಿಗೆ ನಾವೆಂದರೆ ಬಲು ಪ್ರೀತಿ. ಅವರು ಬಹು ಸಾಹಸಿ. 14ನೆಯ ವಯಸ್ಸಿನಲ್ಲೇ ಗಂಡನನ್ನು ಕಳೆದುಕೊಂಡು ತಾಯಿ ಮನೆ ಸೇರಿದ ಅವರು ಪಿತ್ರಾರ್ಜಿತ ಆಸ್ತಿಯಾದ ತೋಟವನ್ನು ತುಂಬಾ ಸಂಪದ್ಭರಿತವಾಗಿ ಮಾಡಿದ್ದರು. "ಆ ಹೆಣ್ಣು ಹೆಂಗುಸು, ಎಂಥಾ ಧೈರ್ಯಶಾಲಿ! ಹೇಗೆ ತೋಟವನ್ನು ಬೆಳೆಸಿದ್ದಾರೆ ನೋಡಿರಿ." ಎಂದು ಸುತ್ತಲಿನವರು ಉದ್ಗರಿಸುತ್ತಿದ್ದರು!

ಅವರ ಹಿರಿಯ ತಮ್ಮ ನಿಂತಕಾಲಿನ ಮೇಲೆ ತಾಯಿಯನ್ನು ಅಕ್ಕನನ್ನು ಮನೆಯಿಂದ ಹೊರಹಾಕಿದಾಗ ಹೊಲದ ಬೇಲಿಯ ಬಳಿ ಅಡಿಗೆ ಮಾಡಿ ಉಂಡರು; ಉಪವಾಸ ಬಳಲಿದರು. ಕಿರಿಯ ತಮ್ಮ (ಡಾ॥ ಬಸಪ್ಪ) ಆಸರೆ ನೀಡಿದ ಮೇಲೆ ಪುನಃ ಚೇತರಿಸಿಕೊಂಡರು. ತಮ್ಮ ಒಡವೆ ಮಾರಿ ಮನೆಯನ್ನು -ಮಣ್ಣಿನ ಮಾಳಿಗೆ ಮನೆ, ಕಟ್ಟಿ ಕೊಂಡರು. ಮನೆ ಕಟ್ಟುವಾಗ ಗರ್ಭಿಣಿ ಗಂಗಮ್ಮನವರು ಗಾರೆ ಉಜ್ಜಿದ್ದನ್ನು ಇನ್ನೂ ನೆನಪಿಸಿಕೊಳ್ಳುತ್ತಾರೆ. ಆ ಮನೆಯಲ್ಲೇ ನಾನು ಹುಟ್ಟಿದ್ದು ದಿ.13-3-1946ರಂದು ಬುಧವಾರ, ಮಧ್ಯಾಹ್ನ 12-50ಕ್ಕೆ.

ಆದರೆ ದುರ್ದೈವವೆಂಬಂತೆ ತಮ್ಮನಾದ ಪ್ರಕಾಶ ದುಶ್ಚಟಗಳಿಗೆ ಬಲಿಯಾಗಿ ಬಹಳಷ್ಟು ಆಸ್ತಿ ಕಳೆದ. ಸ್ವಂತ ಶರೀರ ಶ್ರಮದಿಂದ ಕಟ್ಟದ ಈ ಮನೆಯನ್ನು ಸಹ ಸ್ವಲ್ಪವೇ ಹಣಕ್ಕೆ ಬೇರೆಯವರಿಗೆ ಬಿಟ್ಟುಕೊಟ್ಟ. (ಒಂದು ಸಮಾಧಾನದ ಸಂಗತಿ ಎಂದರೆ ತೆಗೆದುಕೊಂಡವರು ಜಾತಿಯಿಂದ ನಾಯಕರಾದರೂ ನಾನು ಹುಟ್ಟಿದ ಕೋಣೆಯನ್ನು ಶುಭ್ರವಾಗಿ ಗುಡಿಸಿ, ಇಟ್ಟುಕೊಂಡು ಸಂದರ್ಶನಕ್ಕೆ ಹೋದವರಿಗೆ ಭಕ್ತಿಯಿಂದ ಕೋಣೆಯನ್ನು ತೋರಿಸುತ್ತಾರೆ.) ಕಟ್ಟೆಯ ಮೇಲೆ ಒಂದು ದೀಪವನ್ನು ಹಚ್ಚಿಟ್ಟಿರುತ್ತಾರೆ.

ವೀರಮ್ಮಜ್ಜಿಯ ಕಾಲದಲ್ಲಿ ತೋಟವು ಸಮೃದ್ಧವಾಗಿ, ಹಸಿರಿನಿಂದ ನಳನಳಿಸುತ್ತಿತ್ತು. ತೆಂಗು, ಅಡಿಕೆಗಳು ಸೊಂಪಾಗಿ ಬೆಳೆದಿದ್ದವು. ಹುಣಿಸೆಮರ ಯಥೇಚ್ಛವಾಗಿ ಹಣ್ಣು ಬಿಡುತ್ತಿದ್ದವು. ಕಪಿಲೆ ಬಾವಿಯಲ್ಲಿ ಸದಾ ನೀರಿರುತ್ತಿತ್ತು. ಎತ್ತುಗಳು ಕಪಿಲೆಯನ್ನು ಎಳೆಯುವುದು, ಚರ್ಮದ ಬಾನೆಗಳು ನೀರನ್ನು ತಂದು ಮೇಲೆ ಬಗ್ಗಿಸುವುದು (ಏತ ತಲೆವಾಗಿದರೇನು ಗುರು ಭಕ್ತನಾಬಲ್ಲುದೆ?) ಒಂದು ಬಗೆಯ ಕುತೂಹಲದ ವಸ್ತುವಾಗಿತ್ತು. ನಂತರ ಏತದ ಬಾವಿಗಳು ವಿದ್ಯುತ್ ಮೋಟಾರಿನಿಂದ ಕೆಲಸ ಮಾಡತೊಡಗಿದಾಗ ಪರಿಶ್ರಮ ಕಡಿಮೆಯಾಯಿತು. ನಮ್ಮ ತೋಟದ ಬದಿಗೆ ಒಂದು ಹಳ್ಳ ಇದ್ದುದರಿಂದಲೂ, ಆಗ ಮಳೆಯೂ ಈಗಿನಂತೆ ಏರಿಳಿತ ಆಗದೆ ಇದ್ದುದರಿಂದ ಬಾವಿಯಲ್ಲಿ ಸದಾ ನೀರಿರುತ್ತಿತ್ತು. ವೀಳೆಯದೆಲೆಯ ಬಳ್ಳಿ ಗಾಢವಾಗಿ ಬೆಳೆದು ಅರಣ್ಯದ ನೆನಪನ್ನು ತರುತ್ತಿತ್ತು. ಹಾಲುವಾಣ ಗಿಡದ ಆಸರೆಯಲ್ಲಿ ಬೆಳೆದುನಿಂತ ಎಲೆಯ ಬಳ್ಳಿಗೆ ಒಮ್ಮೆ ಸೀರೆ ಉಡಿಸಿ, ಪೂಜೆ ಮಾಡಿ ತೋಟದಲ್ಲಿ ಅಜ್ಜಿವನ ಭೋಜನ ಮಾಡಿಸಿದರು. ದಟ್ಟವಾಗಿ ಬೆಳೆದ ತೋಟದಲ್ಲಿ ಬದುವಿನ ಮೇಲೆ ಕುಳಿತು ಕರಿಗಡುಬು, ಕಾಯಹಾಲು ಸವಿಯುವುದೇ ಒಂದು ವಿಶೇಷ ಅನುಭವ. ಬಾಲ್ಯದ ಇಂಥ ನೆನಪು ಅಚ್ಚೊತ್ತಿ ಉಳಿದಿರುತ್ತದೆ.

ಈ ತೋಟವು ಪಿತ್ರಾರ್ಜಿತ ಆಸ್ತಿಯಾಗಿತ್ತು. ಡಾ॥ ಬಸಪ್ಪನವರ ತಂದೆ ರುದ್ರಪ್ಪನವರಿಂದ ಬಂದುದಾಗಿತ್ತು. ಆದರೆ ನಂತರ ಅವರ ಅಣ್ಣನವರು ತಮ್ಮನಿಗೆ ಪಾಲು ಕೊಡದೆ ಸತಾಯಿಸಿದರು. ಆಗಿನ್ನೂ ಹೆಣ್ಣು ಮಕ್ಕಳಿಗೆ ಆಸ್ತಿಯಲ್ಲಿ ಹಕ್ಕು ಇರಲಿಲ್ಲ. ಅತ್ಯಂತ ಶಾಂತ ಮತ್ತು ಸರಳ ಸ್ವಭಾವದ ತಂದೆಯವರು ನ್ಯಾಯಾಲಯದ ಕಟ್ಟೆ ಹತ್ತಲು ಬಯಸಲಿಲ್ಲ. "ಹೋಗಲಿ ಬಿಡಮ್ಮ; ಅಣ್ಣನಿಗೆ ಮಕ್ಕಳು ಜಾಸ್ತಿ; ಆತನೇ ತಿಂದುಕೊಳ್ಳಲಿ. ನನಗೆ ವೈದ್ಯ ವೃತ್ತಿ ಇದೆ." ಎಂದು ತಾಯಿಗೆ ಸಮಾಧಾನ ಹೇಳುತ್ತಿದ್ದರು. ಅವರು ಇರುವವರೆಗೂ ಕೇಸ್ ಮಾಡಲಿಲ್ಲ. ತಮ್ಮಂದಿರ ಪರವಾಗಿ ವೀರಮ್ಮಜ್ಜಿ ತೋಟವನ್ನು ನೋಡಿಕೊಳ್ಳುತ್ತ ಎರಡೂ ಮನೆಗಳಿಗೆ ತೆಂಗಿನಕಾಯಿ ಮುಂತಾಗಿ ಕೊಡುತ್ತಿತ್ತು. ತೋಟದಲ್ಲಿ ಕನಕಾಂಬರ, ಸುಗಂಧರಾಜ ಹಾಕಿದಾಗ ಹೂವು ಬಿಟ್ಟಾಗ ನೋಡಲು ಕಣ್ಣಿಗೆ

ಹಬ್ಬ ಮುಂದೆ ವೀರಮ್ಮಜ್ಜಿ ತೀರಿಕೊಂಡರು. ಪ್ರಕಾಶನು ನ್ಯಾಯಾಲಯದಲ್ಲಿ ಆಸ್ತಿಯ ಪಾಲಿಗಾಗಿ ದಾವೆ ಹೂಡಿದ. ತೋಟದಲ್ಲಿ ಅರ್ಧಪಾಲು, ತಂದೆ ಡಾ|| ಬಸಪ್ಪನವರ ಸಮಾಧಿ ಇದ್ದ ಭಾಗ ಮತ್ತು ಊರಿನ ದ್ವಾರದಲ್ಲಿ ರಸ್ತೆ ಪಕ್ಕ ಇದ್ದ ಜಮೀನಿನಲ್ಲಿ ಅರ್ಧಪಾಲು ದೊಡ್ಡಪ್ಪ ಚನ್ನವೀರಯ್ಯನವರಿಂದ ಬಂದಿತು. ಪ್ರಕಾಶನೇನೂ ತೋಟವನ್ನು ಅಭಿವೃದ್ಧಿ ಪಡಿಸಲಿಲ್ಲ. ತೆಂಗಿನ ಗಿಡಗಳು ಮತ್ತು ಅಡಿಕೆ ಗಿಡ ಒಣಗಿದವು; ಸುಳಿಯನ್ನು ಕಳೆದುಕೊಂಡವು, ಬಾವಿ ಬತ್ತಿತ್ತು. ಒಂದು ಕಾಲದಲ್ಲಿ ಸಮೃದ್ಧವಾಗಿದ್ದ ತೋಟ ಬಟಾ ಬಯಲಾಗಿ ನಿಂತಿತು. ನೋಡಿದವರೆಲ್ಲ ವೀರಮ್ಮಜ್ಜಿಯನ್ನು ನೆನಪಿಸಿಕೊಂಡು ತೋಟದ ಪರಿಸ್ಥಿತಿ ನೋಡಿ ಮರ ಮರ ಮರುಗುವವರೆ. ಅದನು ಕೊಳ್ಳಲು ಚನ್ನವೀರಪ್ಪನವರ ಮೊಮ್ಮಕ್ಕಳಾದ ವೀರೇಂದ್ರ ಮತ್ತು ನಟರಾಜ್ ಆಸಕ್ತಿ ತೋರಿಸಿದರು.

ಇದಕ್ಕೂ ಬಿಡುಗಡೆಯ ಕಾಲ ಬಂದಿತು. ಮಾತೃಶ್ರೀ ಗಂಗಮ್ಮನವರು ಚಟಪಟಿಸಲು ತೊಡಗಿದರು. ಮಾತಾಜಿ ಹುಟ್ಟಿದ ಊರಿನಲ್ಲಿ ಏನೊಂದು ಗುರುತು ಉಳಿಯದಂತಾಯಿತು ಎಂದು ಹಲುಬುತ್ತ ಆ ಎರಡು ಎಕರೆ (ಗತ ವೈಭವದ ತೋಟ) ಪಾಳು ಭೂಮಿಯನ್ನು ಬಸವ ಧರ್ಮ ಪೀಠಕ್ಕೆ ನೋಂದಾಯಿಸಿದರು. ಎಕ್ಸಿಕ್ಯುಟಿವ್ ಇಂಜಿನಿಯರ್ ಆಗಿದ್ದ ಶರಣ ಭೋಗ ನಂಜುಂಡಯ್ಯನವರು ಲಿಂಗೈಕ್ಯರಾದ ಮೇಲೆ ಅವರ ಧರ್ಮಪತ್ನಿ ಶರಣೆ ವನಜಾಕ್ಷಮ್ಮ ಮಕ್ಕಳಿಲ್ಲದ ಕಾರಣ ತಮ್ಮ ಆಸ್ತಿಯನ್ನು ಮಾರಿ ಬಂದ ಹಣವನ್ನು ಬಸವ ಧರ್ಮ ಪೀಠಕ್ಕೆ ಒಪ್ಪಿಸಿ, ಸಮರ್ಪಣ ಮನೋಭಾವದಿಂದ ಸಾಸಲಟ್ಟಿಯಲ್ಲಿ ನೆಲೆಸಿದ್ದಾರೆ. ಈಗ ಪುನಃ ವೀರಮ್ಮಜ್ಜಿ ಕಾಲದ ಹಸಿರು ವೈಭವ ಮರುಕಳಿಸಿದೆ. ಜಗನ್ಮಾತಾ ಅಕ್ಕಮಹಾದೇವಿ ಮಠವನ್ನು ಕಟ್ಟಿದ್ದೇವೆ. ದಿನ ನಿತ್ಯ ಪ್ರಾರ್ಥನೆ, ವಿಶೇಷವಾಗಿ ಬಸವ ಜಯಂತಿ, ನಿತ್ಯ ದಾಸೋಹ ನಡೆಯುತ್ತಿವೆ. ವನಜಾಕ್ಷಮ್ಮ ತ್ಯಾಗಿ, ಸರಳ ಸ್ವಭಾವದವರು, ಅಜಾತ ಶತ್ರು, ದಾಸೋಹ ಮೂರ್ತಿ. ಬಂದವರನ್ನು ಆದರಿಸುತ್ತಾರೆ; ಪ್ರಸಾದ ಮಾಡಿಸುತ್ತಾರೆ. ಚಿತ್ರದುರ್ಗ ರಾಷ್ಟ್ರೀಯ ಬಸವ ದಳದ ಶರಣರು ಆಗಾಗ ಅಕ್ಕಮಹಾದೇವಿ ಮಠಕ್ಕೆ ಹೋಗಿ, ತೋಟದಲ್ಲಿ ಸುತ್ತಾಡಿ, ವನ ಭೋಜನ ಮಾಡಿ ಬರುತ್ತಾರೆ, ಗ್ರಾಮ ಪಂಚಾಯತಿ ಯವರು ಮಠಕ್ಕೆ ರಸ್ತೆಯನ್ನು ಮಾಡ್ಸಿದ್ದಾರೆ. ಸಾಸಲಹಟ್ಟಿ ಚಿತ್ರದುರ್ಗದಿಂದ 7 ಕಿಲೋ ಮೀಟರ್ ದೂರದಲ್ಲಿದೆ. ಗಂಗಮ್ಮಜ್ಜಿಯವರ ಬಯಕೆ ಎಂದರೆ ಡಾ|| ಬಸಪ್ಪನವರ ಸಮಾಧಿ ಚೆನ್ನಾಗಿ ಆಗಬೇಕು; ಒಂದು ಪ್ರಾರ್ಥನಾ ಮಂದಿರ-ಬಸವ ಮಂಟಪ ಆಗಬೇಕು. ಮತ್ತು ಹುಟ್ಟಿದ ಮನೆ ಸ್ಮಾರಕವಾಗಬೇಕು. ನಿಜ, ಆಸೆಗಳು ನೂರಾರು ಅವು ಕ್ರಿಯಾರೂಪಕ್ಕೆ ಬರಲು ಆರ್ಥಿಕ ಸಂಪನ್ಮೂಲ ಬೇಕಲ್ಲವೆ?

ಹಳ್ಳಿಯ ಜೀವನವೂ ಬಹಳ ಬದಲಾವಣೆ ಹೊಂದಿದೆ. ನಾವು ಬಾಲ್ಯದಲ್ಲಿದ್ದಾಗ ಇನ್ನೂ ವಿದ್ಯುತ್ ದೀಪಗಳು ನಮ್ಮ ಹಳ್ಳಿಗೆ ಬಂದಿರಲಿಲ್ಲ. ಸೀಮೆ ಎಣ್ಣೆ ಲಾಟೀನು, ಬುಡ್ಡಿ ದೀಪಗಳ ಮಿಣುಕು ಬೆಳಕು. ಹೊರಗೆಲ್ಲ ಕತ್ತಲೆ. ಮಾಳಿಗೆ ಮನೆ, ಮೇಲೆ ಕಟ್ಟಿಗೆ ತುಂಡು ಹಾಕಿದ್ದರಿಂದ ಹಾವು-ಚೇಳುಗಳಿಗೆ ಒಳ್ಳೆಯ ಆಶ್ರಯ. ಒಮ್ಮೆ ರಾತ್ರಿ 8ರ ಸಮಯ ಮನೆಯ ಮುಂಭಾಗದಲ್ಲಿದ್ದ ವೆರಾಂಡಾದ ಕಟ್ಟೆ ಮೇಲೆ ಕುಳಿತಿದ್ದೆವು. ನನ್ನ ಸೀರೆ ನೆಲಕ್ಕೆ ತಾಗಿದೆ. ಅದೂ ಇದೂ ಮಾತಾಡುತ್ತ ಮೈಮರೆತಿದ್ದೆವು. ಸಾಕಿದ ಬೆಕ್ಕು ಆ ಮಬ್ಬು ಬೆಳಕಿನಲ್ಲಿ ಹುಳುಗಳನ್ನು ಹಿಡಿಯುತ್ತಾ ಅಡ್ಡಾಡುತ್ತಿತ್ತು. ಆಗಾಗ ಗರ್ಜನೆಯ ಧ್ವನಿ ಮಾಡುತ್ತಿತ್ತು. ಒಮ್ಮೆಲೇ ನನ್ನ ತೊಡೆಯ ಮೇಲೆ ಹಾರಿತು. ಎದೆ

ಝಲ್ಲೆಂದು ನಡುಗಿತು. ರಪ್ ಎಂದು ಮುಂಗಾಲಿನಿಂದ ಬಡಿಯಿತು. ಬುಡ್ಡಿಯನ್ನು ಹತ್ತಿರ ತಂದು ನೋಡುತ್ತೇವೆ. ಒಂದು ದೊಡ್ಡ ಮಂಡರಗಪ್ಪೆ ನನ್ನ ಸೀರೆಯ ನೆರಿಗೆ ಮೇಲಿಂದ ಹತ್ತಿತ್ತು. ಅದನ್ನು ಬೆಕ್ಕು ನೆಲಕ್ಕೆ ಕೆಡವಿತ್ತು. ಬೆಕ್ಕಿನ ಸಾಹಸ ಕಂಡು ಎಲ್ಲರಿಗೂ ಸಂತೋಷವಾಯಿತು. ಮಂಡರಗಪ್ಪೆ ಒಂದು ವಿಷಜಂತು, ಚೇಳಿನ ಆಕಾರದಲ್ಲಿ ಇರುತ್ತದೆ. ಆದರೆ ತುಂಬಾ ದಪ್ಪ. ಅದು ಕಡಿದರೆ ಬದುಕಿ ಉಳಿಯುವುದೇ ಕಷ್ಟವಂತೆ! ಅಷ್ಟು ನಂಜು!

ಬಾಲ್ಯದ ನೆನಪುಗಳಲ್ಲಿ ಉಳಿದಿರುವುದು ಜಾತ್ರೆಯ ಸಂದರ್ಶನ. ನಾಯಕನ ಹಟ್ಟಿಯ ತಿಪ್ಪೇಸ್ವಾಮಿ ಮತ್ತು ಕೊಡದಗುಡ್ಡದ ವೀರಭದ್ರ ಮನೆ ದೇವರು ಎಂದು ಜಾತ್ರೆಗೆ ಕರೆದೊಯ್ದಿದ್ದರು. ಸವಾರಿ ಗಾಡಿಯಲ್ಲಿ ಕುಳಿತು ಎತ್ತುಗಳ ಗಿಲ್ ಗಿಲ್ ಗೆಜ್ಜೆಯ ಧ್ವನಿ ಕೇಳುತ್ತಾ ಒಳಗೆ ಕುಳಿತು ತೊನೆದಾಡುತ್ತ ಹೋಗುವುದು ಒಂದು ಸೊಗಸು. ಸುಂದರವಾದ ಭವ್ಯ ನಿಲುವಿನ ಬಿಳಿಯ ಎತ್ತುಗಳು ಅವುಗಳ ಕೊರಳಲ್ಲಿ ಗೆಜ್ಜೆಸರ, ಗಂಟೆ. ಕೋಡುಗಳಿಗೆ ಕುಚ್ಚು. ಅವು ಉತ್ಸಾಹದಿಂದ ಹೆಜ್ಜೆ ಹಾಕುವುದನ್ನು ನೋಡುವುದೇ ಒಂದು ಚೆಂದ ಅನುಭವ. ಸವಾರಿ ಗಾಡಿಯಲ್ಲಿ ಅಡಿಗೆ ಸಾಮಾನು ಸಹ ಇರುತ್ತಿದ್ದವು. ಕೊಡದ ಗುಡ್ಡದಲ್ಲಿ ಒಂದು ಮೈದಾನದಲ್ಲಿ ನಮ್ಮ ಮನೆತನದವರ ಹೆಸರಿನಲ್ಲಿ ಒಂದು ಪೌಳಿ. ಸುಮಾರು 5 ಅಡಿತ್ತರದ ಗೋಡೆ, ರೂಮಿನ ಆಕಾರದಲ್ಲಿ ಏರಿಸಿ, ಒಂದು ಕಡೆ ಬಾಗಿಲು ಬಿಟ್ಟಿದ್ದರು. ಅಲ್ಲಿ ಹೋಗಿ ಬೀಡುಬಿಟ್ಟು ಅಡಿಗೆ ಮಾಡುವುದು. ನಂತರ ಗುಡಿಗೆ ಎಡೆ ಒಯ್ದು, ಆ ಮೇಲೆ ಜಂಗಮರಿಗೆ ಉಣ್ಣಿಸುವುದು. (ನಮ್ಮಂತೆಯೇ ಇತರರೂ ಜಂಗಮರನ್ನು ಕರೆಯುತ್ತಿದ್ದರು. ಪಾಪ! ಇರುವುದೊಂದು ಹೊಟ್ಟೆ. ದಕ್ಷಿಣೆ ಪಡೆಯಬೇಕಿದ್ದರೆ ಉಣ್ಣಲೇ ಬೇಕು. "ಹೋಗಲಿ ಬಿಡಿ ಊಟ ಮಾಡಲು ಯಾಕೆ ಹಿಂಸೆ ಕೊಡುತ್ತೀರಿ? ದಕ್ಷಿಣೆ ಕೊಟ್ಟು ನಮಸ್ಕಾರ ಮಾಡಿ ಕಳಿಸಿರಿ" ಎಂದು ತಂದೆಯವರು ಹೇಳುತ್ತಿದ್ದರು. ಅಜ್ಜ ಕೇಳಬೇಕಲ್ಲ. ಜಂಗಮರ ಇನ್ನೊಂದು ಸಂಕಷ್ಟ ಮುಗ್ಗಲು ತುಪ್ಪ ತಿನ್ನುವುದು. ಸೋಮವಾರ ನಮ್ಮ ಮನೆಯಲ್ಲಿ ಮೀಸಲುವಾರ ಆವತ್ತಿನ ಹಾಲನ್ನು ಬಳಸುವಂತಿಲ್ಲ. ಕಾಸಿ, ಹೆಪ್ಪು ಹಾಕಿ, ತುಪ್ಪ ಮಾಡಿ ಅದನ್ನು ಮೀಸಲಿಡುವಂತೆ ಒಂದು ಮಡಿಕೆಯಲ್ಲಿ ಹಾಕಿ ಇಡುವುದು. ಮಜ್ಜಿಗೆಯನ್ನು ಎಲ್ಲರಿಗೆ ಹಂಚುವುದು. ಆ ಮೀಸಲು ತುಪ್ಪವನ್ನು ಒಂದು ವರ್ಷಕಾಲ ಸಂಗ್ರಹಿಸಿ ಜಾತ್ರೆಗೆ ಒಯ್ಯುವುದು. ಅದನ್ನು ಜಂಗಮರಿಗೆ ಪಾಯಸಕ್ಕೆ ಹಾಕಿ ಉಣ್ಣಿಸುವುದು. ಉಳಿದ ತುಪ್ಪವನ್ನು ಗುಡಿಗೆ ಕೊಡುತ್ತಿದ್ದರು.) ಅವರಿಗೆ ದಕ್ಷಿಣೆ ಕೊಟ್ಟು ಕಳಿಸಿ ಮನೆಯವರೆಲ್ಲ ಊಟ ಮಾಡುವುದು. ಜಾತ್ರೆಯಲ್ಲಿ ಸುತ್ತಾಡಿ ಬಳೆ ತೊಟ್ಟು, ಹೊಸ ರಿಬ್ಬನ್ ಕೊಂಡು, ಬೆಂಡು ಬತ್ತಾಸು ತಿನ್ನುವುದು. ಪೀಪಿ ಊದಿ, ಬಲೂನ್ ಕೊಂಡು ಆಟವಾಡುವುದು. ಅಷ್ಟೊತ್ತಿಗೆ ತೇರಿನ ಸಮಯವಾಗುತ್ತಿತ್ತು.

ತೇರು ಮೈದಾನಕ್ಕೆ ಹೋಗಿ ತೇರಿನ ಹಗ್ಗ ಹಿಡಿಯುವುದು. ಮರುಗ, ದವನ ಮುಂತಾದ ಹೂ ಪತ್ರೆಗಳನ್ನು ತೇರಿಗೆ ಎಸೆಯುವುದು ಮಾಡಿ ಒಮ್ಮೊಮ್ಮೆ ಅಲ್ಲೇ ತಂಗುತ್ತಿದ್ದರು, ಮತ್ತೊಮ್ಮೆ ಮತ್ತೆ ರಾತ್ರಿಯೇ ಹೊರಟು ಬಿಡುತ್ತಿದ್ದರು.

ಕೆಲವು ಜಾತ್ರೆಗಳಲ್ಲಿ ತೇರಿಗೆ ತೆಂಗಿನಕಾಯಿ ಎಸೆಯುವುದು, ಉತ್ತುತ್ತಿ, ಬಾಳೇ ಹಣ್ಣು ಎಸೆಯುವುದು ಮುಂತಾಗಿ ಮಾಡುತ್ತಾರೆ. ಇವು ಅಪಾಯಕಾರಿ ಆಚರಣೆಗಳು. ನಾಯಕನ ಹಟ್ಟಿಯಲ್ಲಿ ಕ್ರಾಂತಿಕಾರಿ ಶರಣ ತಿಪ್ಪೇಸ್ವಾಮಿಯವರ ಹೆಸರಲ್ಲಿ ಕೊಬ್ಬರಿ ಸುಡುವ ಪಾಪದ ಕೆಲಸ

ಮಾಡುತ್ತಿದ್ದರು. ತಮ್ಮತಮ್ಮ ಶಕ್ತ್ಯಾನುಸಾರ ಕೊಬ್ಬರಿ ಸುಡುತ್ತಾರೆ. ಈಗ ಏನು ಮಾಡುವರೋ ನನಗೆ ಗೊತ್ತಿಲ್ಲ. ಎಂಥ ಅಪವ್ಯಯ ಅನ್ನುವ ಅರಿವು ಜನರಿಗಿಲ್ಲ.

ನಮ್ಮ ಮನೆಗಳಲ್ಲಿ ಹಾಲು ಮಾರುತ್ತಿರಲಿಲ್ಲ. ಎಷ್ಟೇ ಹಾಲು ಬಂದರೂ ಬಳಕೆ ಮಾಡುತ್ತಿದ್ದರು, ಕೇಳಿದವರಿಗೆ ಕೊಡುತ್ತಿದ್ದರೇ ವಿನಾ ದುಡ್ಡಿಗೆ ಮಾರುತ್ತಿರಲಿಲ್ಲ. ಹಾಲು ಅಮೃತ, ಅದನ್ನು ಮಾರಬಾರದು ಎನ್ನುತ್ತಿದ್ದರು. ಸುತ್ತಲಿನ ಜನರು ಬಂದು ಕೇಳಿ ಪಡೆಯುತ್ತಿದ್ದರು. ದಿನಾಲೂ ಮಜ್ಜಿಗೆ ಮಾಡಿ ಮಜ್ಜಿಗೆಯನ್ನು ಹಂಚುತ್ತಿದ್ದರು. ಸೋಮವಾರ ಮಾತ್ರ ಮನೆಯ ಮಕ್ಕಳಿಗೂ ಕೊಡದಂತೆ (ಹಿಂದಿನ ದಿನದ ಹಾಲನ್ನು ಮಕ್ಕಳಿಗಾಗಿ ಕಾಸಿಟ್ಟುಕೊಳ್ಳುತ್ತಿದ್ದರು) ತೆಗೆದಿಟ್ಟು ಮೀಸಲು ತುಪ್ಪ ಮಾಡುತ್ತಿದ್ದರು. ಸಾಂಪ್ರದಾಯಿಕವಾಗಿ ಕೆಲವೊಂದು ಉತ್ತಮ ಆಚರಣೆ ಎನಿಸಿದರೆ ಮತ್ತೆ ಕೆಲವು ಅರ್ಥಹೀನ ಎನಿಸುತ್ತಿದ್ದವು. ನಮ್ಮ ಅಜ್ಜಿ ರುದ್ರಮ್ಮ ಬಹಳ ಮೂಢ ವ್ಯಕ್ತಿ. ಇರುವೆ ಗೂಡಿಗೆ ಸಕ್ಕರೆ, ರವೆ ಮುಂತಾಗಿ ನಮ್ಮ ಕೈಲಿ ಹಾಕಿಸುತ್ತಿದ್ದರು. ಕಾಗೆಗಳಿಗೆ ಅನ್ನ ಚೆಲ್ಲಿಸುತ್ತಿದ್ದರು. ಆದರೆ ದಲಿತರಿಗೆ ಊಟ ಕೊಡುತ್ತಿರಲಿಲ್ಲ, ನೀರು ಕೊಡುತ್ತಿರಲಿಲ್ಲ. ನಮ್ಮ ತಂದೆಯವರು ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ ಓರ್ವ ದಲಿತನನ್ನು ಮನೆಗೆ ಕರೆ ತಂದು ಊಟ ಕೊಡಿಸುತ್ತಿದ್ದರು. ಅಜ್ಜಿ ಸಿಟ್ಟಿಗೆದ್ದು ಮಗನನ್ನು ನಿಂದಿಸುತ್ತಿತ್ತು. ಮುಂದರೆ ಅವರು ಹೃದಯಾಘಾತದಿಂದ ನಿಧನರಾದಾಗ ಅಳುತ್ತ ಅಜ್ಜಿ ಆಡಿದ ಮಾತುಗಳು ಇವು, "ಮಾಡಬಾರದ್ದು ಮಾಡಿದರೆ ಆಗಬಾರದ್ದು ಆಯಿತಂತೆ. ಬೇಡ ಅಂದರೆ ಕೇಳಲಿಲ್ಲ. ಹೊಲೇರಿಗೆ ಊಟ ಕೊಡುಸ್ತಿದ್ದ. ಆ ಪಾಪ (?) ದಿಂದಲೇ ಸಾವು ಬಂತು." ಪ್ರಗತಿಪರ ವಿಚಾರದವರಾಗಿ ಇರಬೇಕಾದ ಲಿಂಗಾಯತರು ಎಂಥಾ ಮೌಢ್ಯದಿಂದ ಕೂಡಿದ್ದಾರೆ ಎಂದು ನಮಗೆ ವಿಷಾದವೆನಿಸುತ್ತದೆ. ಇನ್ನೊಬ್ಬರಿಗೆ ಊಟ ಕೊಟ್ಟರೆ ಸಾವು ಬರುತ್ತ್ಯೆ? ದಲಿತರೂ ಎಲ್ಲರಂತೆ ಮನುಷ್ಯರಲ್ಲವೆ? ಹಳ್ಳಿಗಾಡಿನಲ್ಲಿರುವ ಸಾಮಾನ್ಯ ಲಿಂಗಾಯತರಿಗೆ ತಮ್ಮ ಧರ್ಮಗುರುವಿನ ಆಶಯವಾಗಲಿ, ತತ್ವವಾಗಲಿ ಎಳ್ಳಷ್ಟು ತಿಳಿದಿಲ್ಲ.

ಹಾಲ ಕಂದಲು ತುಪ್ಪದ ಮಡಿಕೆಯ
ಬೋಡು ಮುಕ್ಕು ಎನಬೇಡ
ಹಾಲು ಸಿಹಿ, ತುಪ್ಪ ಕಮ್ಮನೆ ಲಿಂಗಕ್ಕೆ ಬೋನ
ಲಿಂಗದೇವನ ಶರಣರ ಅಂಗಹೀನರೆಂದರೆ ನಾಯಕ ನರಕ.

ಗ್ರಾಮೀಣ ಸಂಸ್ಕೃತಿ ನಶಿಸಿದಂತೆ ವಚನ ಸಾಹಿತ್ಯ ಅರ್ಥವಾಗುವುದೂ ಕಷ್ಟಕರ. ಹಳ್ಳಿಗಳ ಮನೆಗಳಲ್ಲಿ ಮಡಿಕೆಗಳ ಸಾಮ್ರಾಜ್ಯ ಬಲು ದೊಡ್ಡದು. ಮಡಿಕೆಯಲ್ಲಿ ಮಾಡಿದ ಅನ್ನದ ರುಚಿ ಯಾವ ಸ್ಟೀಲ್ ಪಾತ್ರೆಯಲ್ಲಿ ಮಾಡಿದರೂ ಬರದು. ಕಟ್ಟಿಗೆ ಒಲೆಯ ಕಿಚ್ಚಿನಲ್ಲಿ ಸುಟ್ಟ ಬದನೆಕಾಯಿ ಬಜ್ಜಿ ಇನ್ನು ನೆನಪು ಮಾತ್ರ. ಅಡಿಗೆ ಮನೆಯ ಮೂಲೆಯಲ್ಲಿ ಅಡಕಲು ಗಡಿಗೆಯ ಸಾಲು. ಆ ಮಡಿಕೆಗಳನ್ನೋ ಎಣ್ಣೆ ಹಾಕಿ ಉಜ್ಜಿ ವಿಶೇಷವಾಗಿ ಹೊಳೆಯುವಂತೆ ಮಾಡಿರುತ್ತಿದ್ದರು. ಬೆಕ್ಕು ಇಲಿಗಳಿಂದ ಸಾಮಾನುಗಳನ್ನು ರಕ್ಷಿಸಲು ಅಡಕಲು ಗಡಿಗೆ ಸುರಕ್ಷಿತ ಸಾಧನ.

ಅನ್ನ ಮಾಡುವ ಮಡಿಕೆ, ಹಾಲು ಕಾಸುವುದು, ತುಪ್ಪ ಸಂಗ್ರಹಿಸುವ ಮಡಿಕೆ ಇವನ್ನು ಪಳಗಿಸಿ ಇಟ್ಟುಕೊಳ್ಳುತ್ತಿದ್ದರು. ಹಾಲಿನ ಕಂದಲು ಸೌಟುಗಿವುಟು ಬಡಿದು ಕಂಠವು ಕಿತ್ತುಹೋಗಿ ಬೋಡು

ಆಗಿರುತ್ತಿದ್ದರೂ ಅದನ್ನು ಪಳಗಿಸಿದ್ದ ಕಾರಣ ಅದರಲ್ಲೇ ಹಾಲು ಕಾಸುತ್ತಿದ್ದರು. ತುಪ್ಪ ಹಾಕಿಡುವ ಮಡಕೆ ಸಹ ಅದರ ಕಂಠಕ್ಕೆ ಏಟಾಗಿ ಮುಕ್ಕಾಗಿದ್ದರೂ, ಬೋಡಾಗಿದ್ದರೂ ಅದನ್ನೇ ಬಳಸುತ್ತಿದ್ದರು. ಅದು ಬೋಡು, ಮುಕ್ಕು, ಅಮಂಗಲ ಎನ್ನುತ್ತಿರಲಿಲ್ಲ. ಏಕೆಂದರೆ ಅದರಲ್ಲಿ ಕಾಸಿದ ಹಾಲು ಸಿಹಿಯಾಗಿರುತ್ತಿತ್ತು. ತುಪ್ಪವು ಘಮಘಮ ಸುವಾಸನೆ ಬೀರುತ್ತಿತ್ತು. ಮನೆಯಲ್ಲಿ ತಯಾರಾದ ಬೆಣ್ಣೆಯನ್ನು ಕರಗಿಸಿ ತುಪ್ಪ ಮಾಡುತ್ತಿದ್ದರೆ ಅದರ ಕಂಪು ಸುತ್ತಲಿನ ಮೂರು ಮನೆಗಳಿಗೆ ಹಬ್ಬಿರುತ್ತಿತ್ತು. ಎತ್ತರವಾದ ಕಂಭಕ್ಕೆ ದಾರ ಹಾಕಿ ದೊಡ್ಡ ಮಡಿಕೆಯಲ್ಲಿ ಮೊಸರು ಹಾಕಿ ಕಡೆಗೋಲಿನಿಂದ ಮಜ್ಜಿಗೆ ಕಡೆಯುವುದು ಒಂದು ಸೊಗಸಾದ ದೃಶ್ಯ. ಅದರಲ್ಲೂ ಗೃಹಿಣಿ ಕೈತುಂಬ ಬಳೆ ಹಾಕಿಕೊಂಡು ನಿಂತು ಕಡೆಯುತ್ತಿದ್ದರೆ ಬಳೆಗಳ ನಾದ ಮತ್ತಷ್ಟು ಶೋಭೆಯನ್ನು ಹೆಚ್ಚಿಸುತ್ತಿತ್ತು. ಇದರ ಜೊತೆಗೆ ನನ್ನ ಮನಸೆಳೆದ ಮತ್ತೊಂದು ದೃಶ್ಯ ಬೆಳಗಿನ ಜಾವ ಹೆಣ್ಣುಮಕ್ಕಳು ಕುಳಿತು ಬೀಸುವುದು. ಆಗಿನ್ನೂ ಹಿಟ್ಟಿನ ಗಿರಣಿ ಹಳ್ಳಿಗಳಿಗೆ ಬಂದಿರಲಿಲ್ಲ. ಮನೆಯಲ್ಲೇ ಬೀಸಬೇಕು. ಸುಪ್ರಭಾತದಲ್ಲಿ ಮುಖ ತೊಳೆದು ವಿಭೂತಿ ಧರಿಸಿಕೊಂಡು ಕೈ ಬಳೆಗಳ ಸದ್ದು ಮಾಡುತ್ತ ಇಬ್ಬರು ಹೆಣ್ಣುಮಕ್ಕಳು ಎದುರುಬದುರು ಕುಳಿತು ಬೀಸೋ ಕಲ್ಲಿನಿಂದ ಬೀಸುವುದು; ಆಗ ಸುಶ್ರಾವ್ಯವಾಗಿ ಹಾಡುವುದು ಮಕ್ಕಳಾದ ನಾವು ಮಲಗಿ ಅದನ್ನು ಕೇಳಿ ಆನಂದಿಸುತ್ತಿದ್ದುದು ಇನ್ನೂ ನೆನಪಿನಲ್ಲಿ ಉಳಿದಿದೆ.

ಜೀವನದಲ್ಲಿ ಹೊಸ ತಿರುವು

ಎಂ.ಬಿ.ಬಿ.ಎಸ್. ಸೀಟು ಸಿಕ್ಕಿ ಇನ್ನೇನು ಹೋಗಬೇಕು ಎನ್ನುವಾಗಲೇ ನಮ್ಮ ತಾತಂದಿರು ಕಳಿಸಲು ನಿರಾಕರಿಸಿದ್ದರಿಂದ ನಿರಾಶೆ ಆಯಿತಾದರೂ ಬಿ.ಎಸ್‌ಸಿಯ ಓದನ್ನು ಆರಿಸಿಕೊಂಡೆ. ನನ್ನ ಪ್ರಧಾನ ವಿಷಯಗಳಾದ ಜೀವಶಾಸ್ತ್ರ, ಸಸ್ಯಶಾಸ್ತ್ರ, ರಸಾಯನಶಾಸ್ತ್ರಗಳನ್ನು ಓದುವುದಕ್ಕಿಂತಲೂ ಹೆಚ್ಚಾಗಿ ಕನ್ನಡ ಮತ್ತು ಇಂಗ್ಲೀಷ್ ಸಾಹಿತ್ಯವನ್ನು ಓದಲು ಆರಂಭಿಸಿದೆ. ಶೇಕ್ಸ್‌ಪಿಯರ್‌ನ ಮ್ಯಾಕ್‌ಬತ್ ಮತ್ತು ಕುವೆಂಪುರವರ ಮಹಾರಾತ್ರಿ (ಬುದ್ಧನ ಗೃಹನಿರ್ಗಮನದ ಕಥೆ) ನನ್ನ ಮೇಲೆ ಅತುಳ ಪ್ರಭಾವವನ್ನು ಬೀರಿದವು. ಎರಡನೆ ತರಗತಿ ಮುಗಿಸುವಷ್ಟರಲ್ಲೇ ಅಂತರ್ಮುಖಿಯಾಗತೊಡಗಿದೆ. ರಾಮಕೃಷ್ಣ ಪರಮಹಂಸರು ಮತ್ತು ಸ್ವಾಮಿ ವಿವೇಕಾನಂದರ ಜೀವನ ಹಾಗೂ ಅವರ ಕೃತಿಗಳು ಅಪಾರ ಪರಿಣಾಮವನ್ನು ಬೀರತೊಡಗಿದ್ದವು.

ಕಾಲೇಜಿನಿಂದ ಶೈಕ್ಷಣಿಕ ಪ್ರವಾಸವನ್ನೇರ್ಪಡಿಸಿದ್ದು ನಡೆದ ಒಂದು ಪವಾಡ ಸದೃಶ ಘಟನೆ ಬಗ್ಗೆ ಹೇಳಲೇ ಬೇಕು. ಶ್ರೀ ಶಾಂತವೀರಪ್ಪನವರ ನೇತೃತ್ವದಲ್ಲಿ ಸಸ್ಯಶಾಸ್ತ್ರ ವಿಭಾಗದಿಂದ ಹೊರಟ ಪ್ರವಾಸವದಾಗಿತ್ತು. ಚಿತ್ರದುರ್ಗದಿಂದ ಮೈಸೂರಿಗೆ ಟ್ರೇನಿನಲ್ಲಿ ಹೋದೆವು. ಅಲ್ಲಿಂದ ಕೊಯಮತ್ತೂರಿಗೆ ಹೋಗಬೇಕಿತ್ತು. ನಮ್ಮ ಗೆಳತಿ ಒಬ್ಬಳು ಬಹಳ ನಿಧಾನ ಗತಿಯವಳು. ಬೇಗನೆ ಸಿದ್ಧವಾಗದೆ ಟ್ರೇನನ್ನು ತಪ್ಪಿಸಿಕೊಂಡೆವು. ಎಲ್ಲರೂ ಸೇರಿ ಆಕೆಯನ್ನು ಬೈದಿದ್ದೇ ಬೈದಿದ್ದು. ನಂತರದ ಟ್ರೇನು ವಿಳಂಬವಾಗಿ ಹೊರಟಿತು. ಅದರಲ್ಲಿ ನಾವು ಪ್ರಯಾಣಿಸಿದೆವು. ಆದರೆ ಆ ಮೊದಲು ನಾವು ಹೋಗಬೇಕಾದ ಟ್ರೇನ್ ಮಾರ್ಗಮಧ್ಯೆ ಅಪಘಾತಕ್ಕೆ ಈಡಾಗಿತ್ತು. ಉರುಳಿ ಬಿದ್ದ ಎಂಜಿನ್, ಬೋಗಿ ನೋಡಿ ವಿಸ್ಮಿತರಾದೆವು. ಸಿದ್ಧವಾಗಲು ತಡಮಾಡಿ ಟ್ರೇನ್ ತಪ್ಪಿಸಿದ ಆಕೆಗೆ

ಧನ್ಯವಾದ ಹೇಳಲು ಮರೆಯಲಿಲ್ಲ. ಊಟಿ, ದೊಡ್ಡಬೆಟ್ಟ, ಕೊಡೈಕೆನಾಲ್, ಕೂನೂರ್ ಎಲ್ಲ ನೋಡಿದೆವು. ಡಿಸೆಂಬರ್ ತಿಂಗಳಿನ ಕೊರೆಯುವ ಚಳಿಯಲಿ ನಡುಗಿ ಹೋಗಿದ್ದೆವು. ಊಟಿಯ ಮತ್ತು ಕುನ್ನೂರಿನ ಬಾಟನಿಕಲ್ ಗಾರ್ಡನ್‌ಗಳಲ್ಲಿ ಸಸ್ಯಶಾಸ್ತ್ರ ಅಧ್ಯಾಪಕರು ವಿಶೇಷ ಮಾಹಿತಿ ನೀಡಿದರು. ಊಟಿಯ ಬಾಟಾನಿಕಲ್ ಗಾರ್ಡನ್‌ನ ಸಂರಕ್ಷಿತ ಪ್ರದೇಶದಲ್ಲಿರುವ ತೋಡರ ವಸತಿಯನ್ನು ನೋಡಿದೆವು ಅವರ ಗುಡಿಸಲಿನ ಸೌಂದರ್ಯ, ಅಚ್ಚುಕಟ್ಟುತನ ನೋಡಿ ಬೆರಗಾದೆವು. ಆದಿವಾಸಿಗಳಾದ ಅವರ ಕಾಲನಿಯಲ್ಲಿ ಒಂದು ದೊಡ್ಡ ಅರ್ಧ ವೃತ್ತಾಕಾರದ ಗುಡಿಸಲು, ಅದೇ ಅವರ ದೇವಾಲಯ; ಅದರಲ್ಲಿ ಒಂದು 3 ಅಡಿ ಎತ್ತರದ ಮರದ ತುಂಡು, ಅದೇ ಅವರ ದೇವರು!

ಮುಂದೆ ರಾಮೇಶ್ವರ ಸಂದರ್ಶನವಿತ್ತು. ಆದರೆ ನಾವು ಥಾಂಬಮ್ ಹತ್ತಿರ ಹೋಗುವುದರಲ್ಲಿ ಒಂದು ದುರಂತ ಕಣ್ಣೆದುರು ತನ್ನ ಪ್ರಭಾವವನ್ನು ಬಿಟ್ಟು ಹೋಗಿತ್ತು. ಸಮುದ್ರದಲ್ಲಿ ಎದ್ದ ಚಂಡಮಾರುತ ಮತ್ತು ಸಮುದ್ರದ ದೈತ್ಯಾಕಾರದ ಅಲೆಗಳಿಂದಾಗಿ ಧನುಷ್ಕೋಡಿ ಮುಳುಗಿತ್ತು ರಾಮೇಶ್ವರಕ್ಕೆ ಹೋಗುವ ಬ್ರಿಡ್ಜ್ ಕೊಚ್ಚಿ ಹೋಗಿತ್ತು. ನಾವು ಮೊದಲು ಹಾಕಿಕೊಂಡ ಪ್ಲಾನ್ ಪ್ರಕಾರ ಬಂದಿದ್ದರೆ ನಾವು ರಾಮೇಶ್ವರ ತಲುಪಿ ಸಮುದ್ರದ ಆಟೋಟೋಪಕ್ಕೆ ಗುರಿಯಾಗಬೇಕಾಗಿತ್ತು. ಬಹಳಷ್ಟು ಜನ ರಾಮೇಶ್ವರ ದೇವಾಲಯದಲ್ಲಿ ಆಶ್ರಯ ಪಡೆದಿದ್ದರು. ಅಲ್ಲಿ ದಿಗ್ಬಂಧನಕ್ಕೆ ಒಳಗಾದವರನ್ನು ಹೆಲಿಕಾಪ್ಟರ್, ದೋಣಿ ಮೂಲಕ ಇತ್ತ ಕಡೆಗೆ ಕರೆತರುತ್ತಿದ್ದರು. ಸಮುದ್ರದ ಅಲೆಗಳು ದೇವಾಲಯದವರೆಗೆ ಬಂದರೂ ದೇವಾಲಯವನ್ನು ಪ್ರವೇಶಿಸಿರಲಿಲ್ಲ ಎಂದೆಲ್ಲ ಪವಾಡ ಸದೃಶ್ಯವಾಗಿ ಮಾತನಾಡುತ್ತಿದ್ದರು. ನಮ್ಮ ಗೆಳತಿ ಮಾಡಿದ ವಿಳಂಬ ಇಲ್ಲಿಯೂ ನಾವು ಅವಗಡಕ್ಕೆ ಸಿಕ್ಕುವುದನ್ನು ತಪ್ಪಿಸಿತ್ತು. ಒಟ್ಟು ಎರಡು ಗಂಡಾಂತರಗಳಿಂದ ನಾವು ಪಾರಾಗಿದ್ದೆವು. ರಾಮೇಶ್ವರಕ್ಕೆ ನಾವು ಹೋಗಲು ಸಾಧ್ಯವಾಗದಿದ್ದರೂ ದುರಂತವನ್ನು ತಪ್ಪಿಸಿಕೊಂಡ ಬಗ್ಗೆ ನಮಗೆ ಖುಷಿಯುಂಟಾಗಿತ್ತು.

ಫೈನಲ್ ಬಿಎಸ್‌ಸಿಗೆ ಬರುವಷ್ಟರಲ್ಲಿ ನಾನು ಆಯ್ಕೆ ಮಾಡಿಕೊಂಡ ವಿಷಯಗಳು ನನಗೆ ಬೇಡವಾದವು. ಅದರಲ್ಲೂ ಜೀವಶಾಸ್ತ್ರದ ವಿದ್ಯಾರ್ಥಿನಿಯಾಗಿ ಜಿರಳೆ, ಜಿಗಣೆ, ಕಪ್ಪೆ ಮುಂತಾದುವನ್ನು ಕೊಯ್ಯಬೇಕಾದಾಗ ತುಂಬಾ ಆಘಾತವಾಗುತ್ತಿತ್ತು. ಕಡೆಯ ವರ್ಷ ಪಾರಿವಾಳವನ್ನು ಛೇದಿಸುವ ಪ್ರಯೋಗ ಮಾಡಬೇಕಿತ್ತು. ಶುಭ್ರ ಬಿಳಿಯ ಬಣ್ಣದ ಸುಂದರವಾದ ಪಾರಿವಾಳವನ್ನು ಛೇದಿಸಲು ನನಗಾಗಲಿಲ್ಲ. ಇಬ್ಬರಿಗೆ ಸೇರಿ ಒಂದು ಪ್ರಯೋಗ ಕೊಟ್ಟಿದ್ದರು. ಸಹಪಾಠಿಗೆ ಪ್ರಯೋಗವನ್ನು ಬಿಟ್ಟುಕೊಟ್ಟು ನಾನು ಕಣ್ಣುಮುಚ್ಚಿಕೊಂಡೆ. ಇಂಥ ಸಮಯದಲ್ಲೇ ನನ್ನ ಜೀವನದಲ್ಲಿ ಒಂದು ವಿಶೇಷ ತಿರುವು ಸಿಕ್ಕಿತು.

ನಮ್ಮ ಕಾಲೇಜ್ ತುಂಬಾ ಒಂದು ಸುದ್ದಿ ಹರಿದಾಡುತ್ತಿತ್ತು. ಅದೆಂದರೆ ಪೂಜ್ಯ ಲಿಂಗಾನಂದ ಸ್ವಾಮಿಗಳ ಪ್ರವಚನದ ವೈಖರಿ. 1965ರ ತರಳಬಾಳು ಹುಣ್ಣಿಮೆ ಚಿತ್ರದುರ್ಗದಲ್ಲಿ ನಡೆಯುತ್ತಿತ್ತು. ಆ ಕಾರ್ಯಕ್ರಮದ ವೈಭವದ ಪೆಂಡಾಲ್ ವರ್ಣನೆ ಜೊತೆಗೆ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳ ಪ್ರವಚನದ ಬಗ್ಗೆ ಬಗೆಬಗೆಯ ವರ್ಣನೆ ಕೇಳಿ ಬರುತ್ತಿತ್ತು. ಕೆಲವು ಹುಡುಗರ ಹಣೆಯ ಮೇಲೆ ವಿಭೂತಿ ಎಳೆ ಕಂಡವು. ನನಗೆ ಅಚ್ಚರಿ. ಆದರೆ ನಾನು ಮಾತ್ರ

ಕಾರ್ಯಕ್ರಮಕ್ಕೆ ಹೋಗಿರಲಿಲ್ಲ. Talk of the town - ಎಂಬಂತೆ ಊರಲ್ಲೆಲ್ಲ ಪ್ರವಚನದ ಪ್ರಭಾವದ ಬಗ್ಗೆಯೇ ಮಾತು. ಶ್ರೀ.ಓ.ವೀರಬಸಪ್ಪ ಎಂಬ ಸುಪ್ರಸಿದ್ಧ ವಕೀಲರು ಸಮಾಜದ ಗಣ್ಯರು ಪ್ರವಚನ ಕೇಳಿ ಶರಣಾಗಿ ಬಿಟ್ಟರಂತೆ ಎಂಬ ಸುದ್ದಿ. ಇನ್ನು 2 ದಿನ ಮಾತ್ರ ಉಳಿದಿದ್ದವು. "ಕಡೆ ದಿವಸ ಭಾಷಣಗಳಿರುವುದಿಲ್ಲ. ಬರೀ ಉತ್ಸವ. ಇವತ್ತು ಒಂದೇ ದಿನ ಭಾಷಣ. ತಪ್ಪಿಸಿಕೊಳ್ಳಬೇಡ ಕಣೆ, ಬಾರೆ....." ಎಂದು ಗೆಳತಿ ಓಂಕಾರದೇವಿ ಗಂಟುಬಿದ್ದಳು. "ಬಿಡೇ, ಮಾತಿನಲ್ಲಿ ಬಹಳ ಜನ ಚತುರರು, ಅದರಂತೆ ನಡೆಯುವುದಿಲ್ಲ. ಅದಕ್ಕೆ ನನಗೆ ಇಷ್ಟವಿಲ್ಲ." ಎಂದೆ. "ಇಲ್ಲ ಇಲ್ಲ; ಇವರು ಹಾಗಲ್ಲ ನುಡಿದಂತೆ ನಡೀತಾರೆ. ನಾನು ಇಷ್ಟು ಹೇಳ್ತಿನಿ. ನನ ಮಾತಿಗೆ ಬೆಲೆಗೊಟ್ಟಾದರೂ ಬಾ. ಪ್ಲೀಸ್" ನಾನು ಒಪ್ಪಿಕೊಂಡೆ. ಕೈ ಮೇಲೆ ಕೈ ಹಾಕಿ ಭಾಷೆ ತೆಗೆದುಕೊಂಡಳು. "ನಾನು ಕೆಲವು ವಿಷಯ ಚರ್ಚಿಸಬೇಕಿದೆ. ಪೂಜ್ಯರಿರುವ ಸ್ಥಳ ಗೊತ್ತೆ?" ಎಂದು ಕೇಳಿದೆ. "ಖಂಡಿತಾ, ನಮ್ಮ ಮನೆ ಹತ್ತಿರದಲ್ಲೇ ಅವರ ಬಿಡಾರವಿದೆ" ಎಂದಳು. ಕಾಲೇಜನಿಂದ ನೇರವಾಗಿಯೇ ಹೊರಟೆವು.

ನಾನು ಬಾಲ್ಯದಿಂದಲೂ ದೇವರನ್ನು ನಂಬಿಕೊಂಡು ಬಂದವಳು. ಭಕ್ತಿಯೇ ನನ್ನ ಹೃದಯದ ಸಂಪತ್ತು. ಒಮ್ಮೆ ಕನ್ನಡ ಭಾಷಾ ತರಗತಿಗೆ ಹೋಗಿ ಕುಳಿತಿದ್ದೆ. ಅಧ್ಯಾಪಕ ದೊಡ್ಡಯ್ಯ ಎನ್ನುವವರು "ದೇವರು ಎಂಬುದು ಭ್ರಾಂತಿ. ಮುತ್ತಾತ ಹೇಳಿದ ಅಂತ ತಾತಾ ಅವನು ಹೇಳಿದ ಅಂತ ಅಪ್ಪ, ಅಪ್ಪ ಹೇಳಿದ ಅಂತ ನಾನು - ಹೀಗೆ ನಂಬಿಕೊಂಡು ಬರುವುದೇ ಆಗಿದೆ. ದೇವರು ನಮ್ಮ ಮನಸ್ಸಿನ ಭ್ರಾಂತಿ ಕಲ್ಪನೆ" ಎಂದು ಹೇಳಿಬಿಟ್ಟರು. ಅಂದಿನಿಂದ ನನ್ನ ಮನಸ್ಸು ಕಲಕಿ ಹೋಗಿ ತುಂಬಾ ಚಿಂತನೆಯ ಘರ್ಷಣೆ ಅಂತರಂಗದಲ್ಲಿ ನಡೆಯುತ್ತಿತ್ತು. ಇದನ್ನೇ ಸ್ವಾಮೀಜಿಯವರಲ್ಲಿ ಕೇಳೋಣ ಎಂದುಕೊಂಡೆ. ಅಂದು 12-2-1965.

ಬಹುಶಃ ಸಂಜೆ ನಾಲ್ಕು ಗಂಟೆ ಇರಬಹುದು. ಒಟ್ಟಾಗಿ ನಾಲ್ವರು ಗೆಳತಿಯರು ಹೋದೆವು. ಪೂಜ್ಯ ಸ್ವಾಮೀಜಿ ಮಂಚವೊಂದರ ಮೇಲೆ ಕುಳಿತಿದ್ದರು. ಓಂಕಾರ ದೇವಿಯವರ ಮನೆಯವರು ಆಗಲೇ ಪರಿಚಿತರಾಗಿದ್ದರು. "ದೇವರು ಕಲ್ಪನೆಯೋ ಸತ್ಯವೊ?" ನಾನು ಕೇಳಿದೆ.

"ಪರಮ ಸತ್ಯ. ನಾವೂ ನೀವೂ ಇಲ್ಲಿ ಹೇಗೆ ಅಸ್ತಿತ್ವ ಹೊಂದಿದ್ದೇವೆಯೋ ಹಾಗೆ ದೇವರು ನಿತ್ಯ ಸತ್ಯ" ಎಂದು ಹೇಳಿದರು. ಅನೇಕ ಉದಾಹರಣೆಗಳನ್ನು ಕೊಟ್ಟರು. ನನ್ನ ಮನಸ್ಸಿಗೆ ಮನವರಿಕೆಯಾಯಿತು, ಸಮಾಧಾನವೂ ಆಯಿತು. ಆಗ ದೇವರು, ಲಿಂಗ ತತ್ವದರ್ಪಣ ಎಂಬ ಪುಸ್ತಕಗಳನ್ನು ಕೊಂಡುಕೊಂಡೆ. ಅಕ್ಕನ ಪ್ರವಚನ ಓದಬೇಕೆಂಬ ಅಭೀಪ್ಸೆ ಬಲವಾಗಿತ್ತು. ದುಡ್ಡು ಇರಲಿಲ್ಲ. ಉಚಿತವಾಗಿ ಕೊಡುವರೇನೋ ಎಂದು ಕೇಳಿದೆ. ನೀವು ಶ್ರೀಮಂತರು. ನಿಮಗೇಕೆ ಉಚಿತವಾಗಿ ಕೊಡಬೇಕು? ಎಂದು ನಿರಾಕರಿಸಿದರು. ನಂತರ ನಾನು ಎಷ್ಟೋ ಸಲ ಛೇಡಿಸಿದೆ, ಒಂದು ಪುಸ್ತಕವನ್ನು ಉಚಿತವಾಗಿ ಕೊಡದ ಗುರುಗಳು ನೀವು. ಎಂದು. "ಕೊರಳಲ್ಲಿ ನೆಕ್‌ಲೇಸು, ಕೈಯಲ್ಲಿ ಬಂಗಾರದ ಬಳೆಗಳು, ಕಿವಿಯಲ್ಲಿ ಝುಂಕಿ. ನಿಮ್ಮಂತಹ ಶ್ರೀಮಂತರಿಗೆ ಉಚಿತವಾಗಿ ಕೊಡುವುದೆ। ಅದಕ್ಕೇ ಕೊಡಲಿಲ್ಲ" ಶ್ರೀಮಂತಿಕೆ ಇದ್ದರೂ ತಾತ ಶಂಕರಪ್ಪನವರ ಜಿಪುಣತನದಿಂದಾಗಿ ನಮಗೆ ಕೃತಕ ಬಡತನ ಬಂದಿತ್ತು.

ಓಂಕಾರದೇವಿ ಮನೆಯಲ್ಲಿ ಮುಖ ತೊಳೆದು ತರಳಬಾಳು ಹುಣ್ಣಿಮೆಯ ಕಾರ್ಯಕ್ರಮಕ್ಕೆ ಹೋದೆವು. ಭವ್ಯವಾದ ಸಭಾಮಂಟಪ, ಭವ್ಯವಾದ ವೇದಿಕೆ. ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು ಆಕರ್ಷಣೆಯ ಕೇಂದ್ರ ಬಿಂದುವಾಗಿದ್ದರು. ಸಭಾ ಮಂಟಪವನ್ನು ಪ್ರವೇಶಿಸುತ್ತಲೇ ನನಗೆ ವಿದ್ಯುದಾಘಾತವಾದಂತಹ ಅನುಭವ, "ಲೇ.....ಸ್ವಾಮಿ ವಿವೇಕಾನಂದರು ನೋಡು." ಎಂದೆ ವಿಸ್ಮಿತಳಾಗಿ ಓಂಕಾರದೇವಿಗೆ. ಸ್ವಾಮಿ ವಿವೇಕಾನಂದರು ಆಗಿ ಹೋಗಿದ್ದಾರೆ. ಇವರು ಸ್ವಾಮಿ ಲಿಂಗಾನಂದರು ಎಂದಳು ಓಂಕಾರದೇವಿ. ಕೈಗಳನ್ನು ಕಟ್ಟಿ ಸ್ವಾಮೀಜಿ ಕುಳಿತಿದ್ದರು. ಅದೇ ಬಗಲಗಸೆ ಅಂಗಿ, ಅದೇ ತರಹದ ಪೇಟ. ಅದೇ ಕಣ್ಣುಗಳ ಕಾಂತಿ,ಅದೇ ಮುಖಚರ್ಯೆ. ಸ್ವಾಮಿ ವಿವೇಕಾನಂದರ ಪ್ರತಿರೂಪದಂತೆ ಕಾಣುತ್ತಿದ್ದರು. (ದಿ.1-9-2011ರಂದು ಧಾರವಾಡದಲ್ಲಿ ಪೂಜ್ಯ ಅಪ್ಪಾಜಿಯವರ 80ನೆಯ ಜಯಂತಿ ಆಚರಣೆ ಇತ್ತು, ಆಗ ಶ್ರೀ ಮೋಹನ್ ನಾಗಮ್ಮನವರು ಮಾತನಾಡುತ್ತ "ಪೂಜ್ಯ ಲಿಂಗಾನಂದ ಸ್ವಾಮಿಗಳ ಪ್ರವಚನದ ಲೋಹಚುಂಬಕದಂತೆ ಆಕರ್ಷಿಸುಸಿತ್ತು, ನಾವೆಲ್ಲ ವಿದ್ಯಾರ್ಥಿಗಳಿದ್ದಾ ಗ ಕೇಳಿದ್ದೇವೆ. ಅವರ ಕಾಂತಿಯುಕ್ತ ಕಣ್ಣುಗಳು ನಮ್ಮನ್ನು ಸೆಳೆದುಬಿಡುತ್ತಿದ್ದವು." ಎಂದು ನುಡಿದರು.)

ಪೂಜ್ಯ ಸ್ವಾಮೀಜಿ ಅಂದು ಮಾತನಾಡಿದ್ದು ಅನುಭವ ಮಂಟಪ ಎಂಬ ವಿಷಯದ ಮೇಲೆ. ಗುರು ಬಸವಣ್ಣನವರ ವ್ಯಕ್ತಿತ್ವ, ಅನುಭವ ಮಂಟಪದ ವೈಶಿಷ್ಟ್ಯ ಕುರಿತು ಪೂಜ್ಯರು ಮಾಡಿದ ಉಪನ್ಯಾಸ ನನ್ನ ಹೃನ್ಮನಗಳನ್ನು ತುಂಬಿಕೊಂಡಿತು. ಮಾತು ಮೂಕವಾಯಿತು. ಆ ಮಾತುಗಳನ್ನೇ ಮನನ ಮಾಡುತ್ತ ಮನೆ ಸೇರಿಕೊಂಡೆ. ಗುರು ಬಸವಣ್ಣ, ಅಕ್ಕಮಹಾದೇವಿ, ವಚನ ಸಾಹಿತ್ಯ - ಈ ಬಗ್ಗೆ ಏನೇನೂ ಗೊತ್ತಿಲ್ಲದ ಅಜ್ಞಾನಿಯಾಗಿದ್ದೆನಲ್ಲಾ! ಅಗಸ ನೀರೊಳಗಿದ್ದು ಬಾಯಾರಿ ಸತ್ತಂತೆ ಇಷ್ಟು ದಿವಸ ನನ್ನ ಇರುವು ಆಯಿತಲ್ಲಾ ಎಂದು ಪರಿತಪ್ಪಿಸಿದೆ. ಪೂಜ್ಯರಿಗೆ ಹಸ್ತಾಕ್ಷರ ಬೇಕೆಂದು ಆಟೋಗ್ರಾಫ್ ಪುಸ್ತಕ ಕೊಟ್ಟಾಗ ಅದರಲ್ಲಿ "ಅಕ್ಕನ ಅನುಗ್ರಹವಾಗಲಿ" ಎಂದು ಬೇರೆ ಬರೆದಿದ್ದರು. ಅಂದು ಒಂದು ದಿನದ ಭೇಟಿ, ಒಂದು ಉಪನ್ಯಾಸ ನನ್ನ ಬದುಕಿಗೆ ಹೊಸ ತಿರುವು ಕೊಟ್ಟಿತು. ಇದಕ್ಕಾಗಿ ಓಂಕಾರ ದೇವಿಯನ್ನು ಎಂದೂ ನಾನು ನೆನೆಯುತ್ತೇನೆ. ಆಕೆ ಕೈಮೇಲೆ ಕೈ ಹಾಕಿ ಭಾಷೆ ತೆಗೆದುಕೊಂಡು ನನ್ನನ್ನು ಪೂಜ್ಯ ಗುರುಗಳ ದರ್ಶನಕ್ಕೆ ಕರೆದೊಯ್ದಳು. ಒಂದು ವೇಳೆ ನಾನಂದು ಪೂಜ್ಯರನ್ನು ದರ್ಶಿಸದೆ ಇದ್ದರೆ ನನ್ನ ಜೀವನ ರಾಮಕೃಷ್ಣಾಶ್ರಮದ ನೆರಳಲ್ಲಿ ಕಳೆದುಹೋಗಿ ಬಿಡುತ್ತಿತ್ತು, ಏಕೆಂದರೆ ನಾನು ಸನ್ಯಾಸಿಯಾಗುತ್ತಿದ್ದುದು, ಯಾವುದಾದರೂ ರಾಮಕೃಷ್ಣಾಶ್ರಮವನ್ನು ಸೇರುತ್ತಿದ್ದುದು ನಿಜ. ಅಲ್ಲಿಯವರೆಗೆ ಶರಣ ಸಾಹಿತ್ಯದ ಗಂಧಗಾಳಿ ಸಹ ನನ್ನ ಮೇಲೆ ಬೀಸಿರಲಿಲ್ಲ. ಅಂದಿನಿಂದ ಶರಣ ಸಾಹಿತ್ಯ ಓದಲು ಆರಂಭಿಸಿದೆ.

ಪೂಜ್ಯ ಅಪ್ಪಾಜಿ ಬರೆದ ಪುಸ್ತಕ ಕೆಲವೇ ಆದರೂ ಅವು ಓದುಗರ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರುತ್ತವೆ. "ದೇವರು" ಪುಸ್ತಕ ಓದಿದ ಮೇಲೆ ದೇವರು ಕುರಿತಾದ ನನ್ನ ನಂಬಿಕೆ ಮತ್ತಷ್ಟು ಬಲಗೊಂಡಿತು. ಲಿಂಗತತ್ವ ದರ್ಪಣ ಇಷ್ಟಲಿಂಗದ ಮಹತ್ವ ತಿಳಿಸಿ ನಿಷ್ಠೆಯನ್ನು ಬೆಳೆಸಿತು. ಜಂಗಮ ದರ್ಶನ ಪುಸ್ತಕ ಜಂಗಮನ ಸ್ವರೂಪದ ಬಗ್ಗೆ ತಿಳಿಸಿತಲ್ಲದೆ ಜಂಗಮ ಒಂದು ಜಾತಿಯಲ್ಲ ಗಳಿಸಿಕೊಳ್ಳುವ ಅರ್ಹತೆ ಎಂಬುದನ್ನು ದೃಢಪಡಿಸಿತು.

(ಮುಂದುವರಿಯುವುದು..)

ಸಮಸ್ಯೆ...??? ಸಮಾಧಾನ.....!!!!

–ಮಾತಾಜಿ

–ಶಿವಕುಮಾರ್ ಜೋಗೇಕಲ್‌ಮಠ, ಬೆಂಗಳೂರು

? 1 ಹಿಂದು ಧರ್ಮ ಲಿಂಗಾಯತ ಧರ್ಮ ಬಿಟ್ಟು ಕ್ರಿಶ್ಚಿಯನ್,ಮುಸ್ಲಿಂ,ಜೈನ್, ಬೌದ್ಧ, ಸಿಖ್ ಧರ್ಮದ ಬಗ್ಗೆ ನಿಮ್ಮ ಹೊಗಳಿಕೆ ಹೋಲಿಕೆಗಳಿರುತ್ತವೆ. ಇದರಿಂದ ಹಿಂದೂ, ಲಿಂಗಾಯತ ಧರ್ಮಕ್ಕೆ ಅಪಮಾನವಾಗುವುದಿಲ್ಲವೇ? ಈಗೀಗ ಆ ಧರ್ಮಗಳಲ್ಲೂ ಉಪಜಾತಿ, ಜಮಾತಿಗಳೂ ಇವೆ. ಧರ್ಮ ಗ್ರಂಥದ ಪಾಲನೆಯೂ ಆಗುತ್ತಿಲ್ಲ. ಅಲ್ಲಿ ಬಹುದೇವೋಪಾಸನೆ ಇದೆ. ಕ್ಯಾಥೋಲಿಕ್, ಪ್ರೊಟೆಸ್ಟೆಂಟ್, ಸುನ್ನಿ, ಶಿಯಾ ಪಂಥ, ದಿಗಂಬರ್, ಶ್ವೇತಾಂಬರ್ ಯಹೂದಿ ಹೀಗೆ.......... ಪೈಗಂಬರ್ ಬುದ್ಧ, ಯೇಸು, ಮಹಾವೀರ ಗುರುಗಳಲ್ಲದೆ ಬೇರೆ ಗುರು, ದೇವರನ್ನು ಪೂಜಿಸುತ್ತಾರೆ. ನಮ್ಮಲ್ಲೇ ಎಷ್ಟೋ ಸುಧಾರಣೆಗಳನ್ನು ಕಾಣುತ್ತೇವೆ.

* ಹಿಂದೂ ಒಂದು ವ್ಯವಸ್ಥಿತವಾದ (Systematised)ಧರ್ಮವಲ್ಲ. ಅದು ಅವ್ಯವಸ್ಥೆಗಳ ಆಗರ. ಮೂಢನಂಬಿಕೆಗಳ ತವರೂರು. ಲಿಂಗಾಯತ ಧರ್ಮ ಒಂದು ಉತ್ತಮ, ವೈಚಾರಿಕ ಪ್ರಗತಿಪರ ಧರ್ಮವಾಗಿದ್ದರೂ ಇದು ವ್ಯವಸ್ಥಿತ ರೂಪ ತಳೆದಿಲ್ಲ. ವಚನಗಳು ಗೋಧಿ, ಭತ್ತ ಮುಂತಾದ ಧಾನ್ಯಗಳಂತೆ ಅವುಗಳನ್ನು ಸಿದ್ಧಪಡಿಸಿದ ಆಹಾರದ ರೂಪಕ್ಕೆ ತರುವ ಪ್ರಯತ್ನ ಮಾಡಬೇಕಾಗಿದೆ. ಈ ದಿಶೆಯಲ್ಲಿ ನಮಗೆ ಸಂಘಟನೆಗೆ ಮಾದರಿ (Model)ಬೇಕು. ಆ ಮಾದರಿಗಳನ್ನು ವಿದೇಶಿ ಧರ್ಮಗಳಾದ ಕ್ರೈಸ್ತ ಇಸ್ಲಾಂದಲ್ಲಿ ಸ್ವದೇಶಿ ಧರ್ಮಗಳಾದ ಸಿಖ್ ಮತ್ತು ಬೌದ್ಧದಲ್ಲಿ ಕಾಣಬಹುದು. ಇವುಗಳಿಗೆ ಬೈಬಲ್, ಕುರಾನ್, ಗ್ರಂಥ ಸಾಹೇಬ್, ತ್ರಿಪೀಟಿಕ ಧರ್ಮಗ್ರಂಥಗಳಾಗಿವೆ. ಭಗವದ್ಗೀತೆಗೆ ಹಿಂದೂ ಧರ್ಮದ ಗ್ರಂಥವಾದರೂ ಮೂಲಭೂತ ವಿಚಾರಗಳಲ್ಲಿ ನಮಗೂ ಅರ್ಥಾತ್ ಬಸವ ಗೀತೆಗೂ ಅದಕ್ಕೂ ವ್ಯತ್ಯಾಸವಿದೆ. ಧರ್ಮಗಳಲ್ಲಿ 2 ಪ್ರಕಾರ. ನೈಸರ್ಗಿಕ ಧರ್ಮ(Natural Religion) ಸುಧಾರಣಾತ್ಮಕ ಧರ್ಮ (Reformative Religion) ಎಂಬುದಾಗಿ ಹೊರ ದೇಶದಲ್ಲಿ ಯಹೂದಿ ನೈಸಗಿಕ ಧರ್ಮ, ಕ್ರೈಸ್ತ ಮತ್ತು ಇಸ್ಲಾಂ ಸುಧಾರಣಾತ್ಮಕ ಧರ್ಮ. ಭಾರತದಲ್ಲಿ ಹಿಂದು ಧರ್ಮ ನೈಸರ್ಗಿಕ ಜೈನ, ಬೌದ್ಧ, ಲಿಂಗಾಯತ, ಸಿಖ್ ಸುಧಾರಣಾತ್ಮಕ ಧರ್ಮಗಳು. ನೈಸರ್ಗಿಕ ಧರ್ಮ ಹುಟ್ಟಿನಿಂದ ಮಾತ್ರ ಬರುತ್ತದೆ. ಸುಧಾರಣಾತ್ಮಕ ಧರ್ಮ ದೀಕ್ಷಾ ಸಂಸ್ಕಾರದಿಂದ ಬರುತ್ತದೆ ಆದ್ದರಿಂದ ಲಿಂಗಾಯತ ಧರ್ಮಕ್ಕೆ ಹೋಲಿಕೆ ಅಲ್ಲಿ ಮಾತ್ರ ಸಿಗುತ್ತದೆ. ಇನ್ನು ಹೊಗಳಿಕೆ? ಒಳ್ಳೆಯದನ್ನು ಏಕೆ ಹೊಗಳಬಾರದು?

ವಿದ್ಯಾವಂತರಷ್ಟೇ ಅಲ್ಲ ನಿರಕ್ಷರಕುಕ್ಷಿ ಮುಸಲೀಮರು ರಂಜಾನ್ ಆಚರಿಸಿ, ಈದ್ ಮಿಲಾದ್ ದಿವಸ ಶಿಸ್ತಿನಿಂದ ಸಾಮೂಹಿಕ ಪ್ರಾರ್ಥನೆ ಮಾಡುವುದನ್ನು ಕಂಡರೆ (ಒಳಗೇ ಎದೆ ನಡುಗುತ್ತದೆ ಆ ಸಂಘಟನೆ ನೋಡಿ) ಯಾರಿಗೆ ತಾನೇ ಹೊಗಳಬೇಕು ಎನ್ನಿಸುವುದಿಲ್ಲ? ಅವರ ಹಜ್ ಯಾತ್ರೆಯೇ ನಮ್ಮ ಶರಣ ಮೇಳಕ್ಕೆ ಪ್ರೇರಣೆ. ಪ್ರತಿಯೊಬ್ಬ ಕ್ರೈಸ್ತನು ಬಡವರಿರಲಿ, ಶ್ರೀಮಂತರಿರಲಿ ತಪ್ಪದೆ ಚರ್ಚಿಗೆ ಭಾನುವಾರದ ಪ್ರಾರ್ಥನೆಗೆ ಹೋಗುವರು. ಇದು ಅಭಿನಂದನೀಯವಲ್ಲವೆ? ಮುಸಲೀಮರಲ್ಲಿ ಶಿಯಾ–ಸುನ್ನಿ ಎಂಬ ಎರಡು ಪಂಗಡಗಳಿದ್ದರೂ ಅವರು ನಂಬುವುದು ಒಂದು ದೇವರು ಅಲ್ಲಹ, ಒಬ್ಬ

ಧರ್ಮಗುರು ಮೊಹಮ್ಮದ್ ಪೈಗಂಬರ್, ಒಂದು ಗ್ರಂಥ ಕುರಾನ್. ಕ್ರೈಸ್ತರಲ್ಲಿ ಕ್ಯಾಥೋಲಿಕ್ ಪ್ರಾಟೆಸ್ಟಂಟ್ ಎರಡು ಎರಡು ಪಂಗಡ ಇದ್ದರೂ ಅವರು ನಂಬುವುದು ಒಬ್ಬ ದೇವರನ್ನು ಯಹೋವ, ಒಬ್ಬ ಪ್ರವಾದಿಯನ್ನು ಏಸುಕ್ರಿಸ್ತ, ಒಂದು ಗ್ರಂಥ ಬೈಬಲ್, ಇದನ್ನು ನೋಡಿ ನಾವು ಲಿಂಗಾಯತರು ಕಲಿಯಬೇಕಾಗಿದೆ. ಒಬ್ಬ ಧರ್ಮಗುರು ಬಸವಣ್ಣ, ಒಂದು ದೇವರು (ಇಷ್ಟ) ಲಿಂಗದೇವ, ಒಂದು ಸಾಹಿತ್ಯ – ವಚನ ಸಾಹಿತ್ಯ.

? 2 ಗುರುಬಸವಣ್ಣನವರ ವೈವಾಹಿಕ ಜೀವನದ ಬಗ್ಗೆ ಹೇಳಿರಿ. ಅವರಿಗೆ ಪತ್ನಿಯರು ಇಬ್ಬರೇ ?

* ಗುರು ಬಸವಣ್ಣನವರು ಬಾಲಕರಿರುವಾಗಲೇ ತೊಟ್ಟಿಲ ಶಿಶುವಾಗಿದ್ದ ಬಲದೇವರಸರ ಪುತ್ರಿ ನೀಲಗಂಗಳೊಡನೆ ವಿವಾಹವಾಯಿತು. ಮುಂದೆ ವಿದ್ಯಾಭ್ಯಾಸ ಮುಗಿದ ಮೇಲೆ ಅಧಿಕೃತ ವಿವಾಹ ಮಂಗಳವೇಡೆಯಲ್ಲಿ ಆಯಿತು. ಅವರ ದಾಂಪತ್ಯದಲ್ಲಿ ಅರಳಿದ ಮಗುವು ಬಾಲ ಸಂಗಯ್ಯ 5–6 ವರ್ಷಗಳ ಬಾಲಕನಿರುವಾಗಲೇ ತೀರಿಹೋಯಿತು. ಮುಂದೆ ಅವರು ವೈರಾಗ್ಯ ಜೀವನದಲ್ಲಿ ಪತ್ನಿಯನ್ನೇ ತಾಯಿ ಎಂದು ಭಾವಿಸಿ ಮುನ್ನಡೆದರು. ತಾಯಿ ನೀಲಗಂಗಮ್ಮನವರ ದಿವ್ಯ ಸಮಾಧಿ ಕೂಡಲ ಸಂಗಮದ ಬಳಿ ಕೃಷ್ಣಾ ನದಿಯ ಆಚೆಯ ಬದಿಗೆ ತಂಗಡಗಿ ಬಳಿ ಇದೆ.

ಇಬ್ಬರು ಪತ್ನಿಯರೆಂಬುದು ಕವಿ ಕಲ್ಪನೆ. ವಿನಾ ಕಾರಣ ಕವಿ ಕಲ್ಪನೆಯಿಂದ ಸೃಷ್ಟಿಯಾದ ಗಂಗಾಂಬಿಕೆಗೆ ಮುಗುಟಖಾನ ಹುಬ್ಬಳ್ಳಿ ಬಳಿ ಒಂದು ಸ್ಮಾರಕವನ್ನು ಸರ್ಕಾರ ಕಟ್ಟಿಸಿಬಿಟ್ಟಿತು. ಅಲ್ಲಿದ್ದ ಹಳೆಯ ಗುಡಿ ಹೊಳೆ ಗಂಗವ್ವನ ಗುಡಿ, ಗಂಗಾಂಬಿಕೆಯ ಸಮಾಧಿ ಅಲ್ಲ.

? 3 ಕೆಲವು ಶರಣರು ಪುಸ್ತಕ ಪ್ರಕಟಣೆಗೆ ದೇಣಿಗೆ ಕೊಡುವರು ಪ್ರಿಂಟಾದ ಮೇಲೆ ಬೈಬಲ್ಲಿನಂತೆ ನೀವು ಏಕೆ ಉಚಿತವಾಗಿ ಹಂಚಬಾರದು ?

* ಇಂಗ್ಲೆಂಡ್, ಅಮೇರಿಕಾ, ಜರ್ಮನಿ ಮುಂತಾದ ದೇಶಗಳಿಂದ ಕ್ರೈಸ್ತ ಧರ್ಮ ಪ್ರಚಾರಕ್ಕೆ, ಸೌದಿ ಅರೇಬಿಯಾದಂತಹ ದೇಶಗಳಿಂದ ಇಸ್ಲಾಂ ಪ್ರಚಾರಕ್ಕೆ ಪ್ರವಾಹದೋಪಾದಿಯಲ್ಲಿ ಹಣ ಬರುತ್ತದೆ. ಅವರು ಮುದ್ರಿಸಿ, ಉಚಿತವಾಗಿ ಹಂಚುವುದಾಗಿ ಖರ್ಚುತೋರಿಸಲೇಬೇಕು. ನಮ್ಮ ಪಾಡು ಹಾಗಲ್ಲ. ಶರಣರು ಇಡೀ ಪುಸ್ತಕದ ಖರ್ಚು ಕೊಡರು. ಅಲ್ಪಸ್ವಲ್ಪ ಬರುತ್ತದೆ. ನಾವು ಉತ್ಪಾದನಾ ವೆಚ್ಚದಲ್ಲಿ ದೇಣಿಗೆ ಹಣ ತೆಗೆದು ಬೆಲೆಯನ್ನು ನಿರ್ಧರಿಸುತ್ತೇವೆ. ನೀವು ಇನ್ನಿತರರ ಪುಸ್ತಕದ ಬೆಲೆಯೊಡನೆ ನಮ್ಮ ಪುಸ್ತಕಗಳ ಬೆಲೆ ಹೋಲಿಸಿ ನೋಡಿರಿ. ಬಹಳ ಕಡಿಮೆ ಇರುತ್ತದೆ. ಪುಸ್ತಕ ಮಾರಾಟದ ಹಣವನ್ನು ಮತ್ತೆ ಬೇರೆ ಪುಸ್ತಕ ಮುದ್ರಿಸಲು ಬಳಸುತ್ತೇವೆ.

? 4 ನಾನು ಮೊದಲು. ಬಹುದೇವತೋಪಾಸಕನಾಗಿದ್ದೆ. ತತ್ವ ತಿಳಿಯುತ್ತ ಬಂದಂತೆ ಏಕದೇವೋಪಾಸಕನಾಗಿದ್ದೇನೆ. ನಮ್ಮ ಬಂಧುಗಳಿಗೆ ಮಿತ್ರರಿಗೆ ಈ ವಿಷಯ ಹೇಳಿದಾಗ ಕೂಡ ಅವರು ಲಕ್ಷ್ಮಿ, ಗಣಪತಿ, ಸಾಯಿಬಾಬಾ ಇತ್ಯಾದಿ ಪೂಜೆ ಬಿಡುತ್ತಿಲ್ಲವಲ್ಲ!! ಅವರನ್ನು ತಿದ್ದುವುದು ಹೇಗೆ?

* ಸುತ್ತಲೂ ರೋಗಾಣುಗಳಿದ್ದು ಅವುಗಳ ಮಧ್ಯೆ ಆರೋಗ್ಯವಂತರಾಗಿ ಬದುಕಲು ದೇಹದಲ್ಲಿ ಹೆಚ್ಚಿನ ರೋಗನಿರೋಧಕ ಶಕ್ತಿ ಇರಬೇಕು. ಹಾಗೆ ಮೂಢನಂಬಿಕೆ, ಬಹುದೇವತೋಪಾಸನೆಯ ಹಿಂದು ಪರಿಸರದಲ್ಲಿ ವೈಚಾರಿಕ ಲಿಂಗಾಯತ ಧರ್ಮ ಅಳವಡಿಸಿಕೊಳ್ಳಲು ಬೌದ್ಧಿಕ, ಮಾನಸಿಕ ದಾರ್ಢ್ಯತೆ ಬೇಕು. ಇದು 1. ಪ್ರವಚನ

ಕೇಳುವುದರಿಂದ 2. ವಚನ ಸಾಹಿತ್ಯ ಓದುವುರಿಂದ 3. ಶರಣರ ಸಂಗದಲ್ಲಿ ಒಡನಾಡುವುದರಿಂದ ಸಾದ್ಯವಾಗುವುದು. ಸಾಹಿತ್ಯ ಕೊಟ್ಟು ಓದಿಸಿರಿ. ವಾರದ ಪ್ರಾರ್ಥನೆ ಶರಣ ಸಂಗಮಕ್ಕೆ ಬಸವ ಮಂಟಪಕ್ಕೆ ಬನ್ನಿ, ಅವರನ್ನು ಕರೆತನ್ನಿರಿ. ಗೃಹಸ್ಥರಿಗೆ ಕೆಲವು ಆಚರಣೆಗಳ ಅಗತ್ಯವಿರುತ್ತದೆ. ಇದಕ್ಕೆ ಬೇಕಾದ ಪರ್ಯಾಯ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಅವನ್ನು ನೋಡಿದಾಗ ಎಲ್ಲರೂ ಪರಿವರ್ತನೆಗೊಳ್ಳುವರು.

? 5 ನೀವು ಮಾಡಿದ ಕಾರ್ಯ ಸಾಧನೆ ಬಗ್ಗೆ ನಮಗೆ ಅಭಿಮಾನವಿದೆ. ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ಆದರೆ ವಚನಾಂಕಿತವನ್ನು ಬದಲು ಮಾಡಿ, ಕೂಡಲ ಸಂಗಮದೇವ ಬದಲಿಗೆ ಲಿಂಗದೇವ ಮಾಡಿದ್ದು ಬೇಸರ ತಂದಿದೆ.

* ಲಿಂಗದೇವವನ್ನು ನೀವು ಅರ್ಥ ಮಾಡಿಕೊಳ್ಳುವ ಕಾಲ ದೂರವಿಲ್ಲ. ಬಹುದೇವತೋಪಾಸನೆಯಿಂದ ಏಕದೇವೋಪಾಸನೆಗೆ ದೊಡ್ಡ ಹೆಜ್ಜೆ ಇಟ್ಟದ್ದೀರಿ. ಇನ್ನು ಇದು ಸಣ್ಣ ಹೆಜ್ಜೆ. ಗುರು ಬಸವಣ್ಣನವರು ಬಾಲ್ಯದಲ್ಲಿ ಬಹುದೇವತೋಪಾಸಕ ಕುಟುಂಬದಿಂದ ಬಂದವರು. ಗುರುಕುಲಕ್ಕೆ ಒಂದು ಏಕದೇವತಾ (ಶಿವ) ಉಪಾಸಕರಾದರು. ಆಗ ಅವರು ಸ್ಥಾವರಲಿಂಗ ಪೂಜೆ ಮಾಡುವ ಪೂಜಾರಿಯಾಗಿದ್ದರು. ತಮ್ಮ 21ನೆಯ ವಯಸ್ಸಿನಲ್ಲಿ ಸಾಕ್ಷಾತ್ಕಾರದ ಅನುಭವ ಪಡೆದರು. ಇಷ್ಟಲಿಂಗದ ಆವಿಷ್ಕಾರ ಮಾಡಿದರು. ಸ್ಥಾವರ ಲಿಂಗೋಪಾಸನೆಯನ್ನು ಬಿಡಿಸಿದರು, ಖಂಡಿಸಿದರು. ಕೂಡಲ ಸಂಗಮದೇವ ಸಂಕೇತಿಸುವುದು ಸ್ಥಾವರ ಲಿಂಗವನ್ನು ಅಂದಾಗ ಸಾಕ್ಷಾತ್ಕಾರದ ನಂತರ ಅವರು ದೇವರನ್ನು ಬೇರೆ ಹೆಸರಿನಿಂದ ಕರೆದಿರಲೇಬೇಕಲ್ಲ? ಅದೇ ಲಿಂಗದೇವ! ಪೂಜಿಸಲು ಹೇಳಿದ್ದು ಈ ನಿರಾಕಾರನಾದ ಸೃಷ್ಟಿಕರ್ತನ ಸಾಕಾರವಾದ ಇಷ್ಟಲಿಂಗದೇವನನ್ನು ಲಿಂಗದೇವನ ಪರಿಕಲ್ಪನೆ ಗುರು ಬಸವಣ್ಣನವರ ಕೊಡುಗೆ. ಅವರೇ ತಮ್ಮ ವಚನಗಳಲ್ಲಿ ಬಳಸಿರುವ ಪದ. ನಾನು ಸಂಶೋಧಿಸಿದ್ದೇನೆ ಅಷ್ಟೆ.

? 6 ಸೊಲ್ಲಾಪುರ ಜಿಲ್ಲೆಯ ಮಂಗಳವೆಡೆಗೆ ನಾನು ಹೋಗಿ ಬಂದೆ. ಅಲ್ಲಿ ಬಸವಣ್ಣನವರಿಗೆ ಸಂಬಂಧಿಸಿದ ಯಾವ ಕುರುಹೂ ಇಲ್ಲವಲ್ಲ?

* ಅಹುದು ಕಾವ್ಯಗಳಲ್ಲಿ ಪ್ರಸ್ತಾಪವಾಗಿದೆ. ಸ್ಥಳದಲ್ಲಿ ಯಾವ ಕುರುಹೂ ಇಲ್ಲ. ಮಂಗಳವೇಡೆಯಲ್ಲಿ ಲಿಂಗಾಯತರ ಸಂಖ್ಯೆ ಬಹಳವಿದೆ. ಅಲ್ಲಿ ಏನಾದರೂ ಸ್ಮಾರಕ ಆಗಬೇಕೆಂದು ಅಲ್ಲಿಯ ಜನರು ಚಟಪಟಿಸುತ್ತಿದ್ದಾರೆ. ಗುರು ಬಸವಣ್ಣನವರು ಸುಮಾರು 5 ವರ್ಷ ಅಲ್ಲಿದ್ದರು. ಮದುವೆಯಾಗಿದ್ದು ಅಲ್ಲಿಯೇ!

? 7 ಅಲ್ಲಮಗಿರಿಯನ್ನು ನೋಡಿ ಬಂದೆ. ನೀವು ಮೂಲಸ್ಥಾನದಲ್ಲಿ ಬೆಳೆಸಬಹುದಾಗಿತ್ತು. ಬೇರೆ ಜಾಗ ಖರೀದಿಸಿ, ಮಠ ಕಟ್ಟಿದ್ದೇಕೆ?

ಮೂಲ ಜಾಗವನ್ನು ಅಭಿವೃದ್ಧಿಪಡಿಸುವುದೇ ನಮ್ಮ ಗುರಿಯಾಗಿತ್ತು. ಆದರೆ ಆ ಗುಡಿಯ ಪೂಜಾರಿಕೆ ವಂಶಪಾರಂಪರ್ಯದಿಂದ ಬಂದಿದ್ದು ಸುಮಾರು 60 ಜನ ಹಕ್ಕುದಾರರಾಗಿದ್ದಾರೆ. ಅವರಲ್ಲಿ ಅರ್ಧದಷ್ಟು ಜನ ಬಿಟ್ಟುಕೊಡಲು ಒಪ್ಪಲಿಲ್ಲ. ಹೀಗಾಗಿ ಪ್ರತ್ಯೇಕವಾಗಿ ಮಾಡಬೇಕಾಯಿತು.

*8 ಪಂಚಪೀಠಾಧೀಶ್ವರರ ಬಂಗಾರದ ಕಿರೀಟ, ಅಡ್ಡಪಲ್ಲಕ್ಕಿ ವ್ಯವಸ್ಥೆಯನ್ನು ಟೀಕಿಸುವಿರಿ. ಭಕ್ತರು ಸ್ವಯಂ ಇಚ್ಛೆಯಿಂದ ಅವನ್ನು ಮಾಡಿದರೆ ತಪ್ಪೇನು?

****

ಸ್ವಾಮಿಗಳು, ಮಠಾಧೀಶರು ವೈರಾಗ್ಯ ಮೂರ್ತಿಗಳು ಅವರು ಸರಳವಾಗಿರಬೇಕು. ಹೆಣ್ಣು, ಹೊನ್ನು, ಮಣ್ಣುಗಳಿಂದ ಮುಕ್ತರಾಗಿರಬೇಕು ಇದು ತತ್ವ, ಇನ್ನು ಕಾಲಮಾನ ದೃಷ್ಟಿಯಿಂದ ವಿಚಾರಶೀಲ ಯುವ ಪೀಳಿಗೆಯವರು ಆಡಂಬರವನ್ನು ಇಷ್ಟಪಡದು. ಆಡಂಬರ, ಡಂಭಾಚಾರದ ನಡೆಯಿಂದ ಧರ್ಮದ ಬಗ್ಗೆಯೇ ಜಿಗುಪ್ಸೆ ಹುಟ್ಟುತ್ತದೆ. ಭಕ್ತರು ಕೇಳಿದ್ದಕ್ಕೆಲ್ಲ ಗುರುಗಳು ಒಪ್ಪಬಾರದು. ಆದರ್ಶವನ್ನು ಅಳವಡಿಸಿಕೊಳ್ಳಲು ಭಕ್ತರಿಗೆ ತರಬೇತಿ ಕೊಡಬೇಕು. ನಾಯಿ ಬಾಲವನ್ನು ಅಲ್ಲಾಡಿಸಬೇಕೇ ವಿನಾ ಬಾಲವೇ ನಾಯಿಯನ್ನು ಅಲ್ಲಾಡಿಸುವಂತೆ ಆಗಬಾರದು. ಒಂದು ಕಾಲವಿತ್ತು ಗುರುಗಳು ದರ್ಶನಕೊಡಬೇಕಾದರೆ ಪಲ್ಲಕ್ಕಿಯನ್ನು ಅಡ್ಡಲಾಗಿ ಹೊರಬೇಕಿತ್ತು. ಈಗ ಮೆರವಣಿಗೆಯ ಸಾಧನಗಳು ಬೇಕಾದಷ್ಟು ಬಂದಿವೆ. ಜನರ ಹೆಗಲ ಮೇಲೆ ಜೀವಂತವಿರುವಾಗಲೇ ಹತ್ತಿ ಹೋಗುವುದು ಸೂಕ್ತವಲ್ಲ.

*9 ಭಾರತದಲ್ಲಿ ಪೂರ್ವಜರೆಲ್ಲ ದ್ರಾವಿಡ ಮೂಲದವರು. ಆಗ ಇದ್ದುದು ಶಿವನ ಪೂಜೆಯೊಂದೇ! ಅಂದಿನಿಂದಲೂ ಸ್ಥಾವರಲಿಂಗ,ಇಷ್ಟಲಿಂಗ ಪೂಜೆ ಸಾಗಿಬಂದಿದೆ ಎನ್ನುವರಲ್ಲ?

* ಪೂರ್ವಜರೆಲ್ಲ ದ್ರಾವಿಡರು. ಮೊದಲು ಇದ್ದುದು ಶಿವಾರಾಧನೆಯೊಂದೇ ಎಂಬುದು ಸತ್ಯವೇ ಸರಿ. ಶಿವನ ಪ್ರತೀಕವಾದ ಸ್ಥಾವರಲಿಂಗಪೂಜೆ ಬಹುಪುರಾತನ. ಅದಕ್ಕಾಗಿಯೇ ಕಾಶಿ ವಿಶ್ವನಾಥನಿರಲಿ, ಶ್ರೀಶೈಲ ಮಲ್ಲಿಕಾರ್ಜುನನಿರಲಿ ಅಲ್ಲಿ ನಡೆಯುವುದು ಶಿವನಪೂಜೆ, ಶಿವಸ್ತೋತ್ರ, ಆದರೆ ಇಷ್ಟಲಿಂಗ ಶಿವನ ಕುರುಹಲ್ಲ. ನಿರಾಕಾರನಾದ ಪರಮಾತ್ಮನ ಕುರುಹು. ಇದು ಗುರು ಬಸವಣ್ಣನವರ ಕೊಡುಗೆ. ಅವರಿಂದ ಬಂದುದು ಇಷ್ಟಲಿಂಗಾರಾಧನೆ ಮತ್ತು ಲಿಂಗಾಯತ ಧರ್ಮ.

? 10 ಗುರು ಬಸವಣ್ಣನವರು ಮರ್ತ್ಯಲೋಕದ ತಮ್ಮ ಕರ್ತವ್ಯ ಮುಗಿಯಿತೆಂದು, ಜವಾಬ್ದಾರಿಯನ್ನು ಬೇರೆಯವರಿಗೆ ವಹಿಸಿಕೊಟ್ಟು, ಹೊಳೆ ಹಾರಿದರು ಎಂದು ಕೆಲವರು ಹೇಳುತ್ತಾರೆ. ಇದು ತಪ್ಪೇನೂ ಅಲ್ಲ. ದೇಹವನ್ನು ಹೇಗಾದರೂ ಬಿಡುಗಡೆ ಮಾಡಿ ಕೊಳ್ಳುವುದು ತಪ್ಪು ಹೇಗೆ ಆಗುತ್ತದೆ!?

* ವೈದಿಕ ಮಾರ್ಗಾನುಯಾಯಿಗಳು ದೇಹವನ್ನು ಪಂಚಭೂತಗಳಲ್ಲಿ ವಿಲೀನಗೊಳಿಸುವರು. ಶಂಕರಾಚಾರ್ಯರು ಹಿಮಾಲಯದಲ್ಲಿ ನಡೆದು ಹೋದರು. ವಿವೇಕಾನಂದರು ಜಲಪ್ರವೇಶ ಮಾಡಿದರು. ಗುರು ಗೋವಿಂದಸಿಂಗರು ಅಗ್ನಿಪ್ರವೇಶ ಮಾಡಿದರು. ಆದರೆ ಬಸವಣ್ಣನವರು ಅಪ್ರತಿಮಯೋಗಿ ಇದ್ದ ಕಾರಣ ಇಚ್ಛಾಮರಣಿಯಾಗಿ, ಯೋಗವಿದ್ಯೆಯ ಮೂಲಕ ದೇಹವನ್ನು ಬಿಟ್ಟರು. ಇದಕ್ಕೆ ವಚನಗಳೇ ದಾಖಲೆ. ಅವರು ಜಲಪ್ರವೇಶ ಮಾಡಿಲ್ಲ. "ಭಕ್ತಿ ಎಂಬ ಪೃಥ್ವಿಯ ಮೇಲೆ" ಎಂಬ ವಚನವೇ ಜ್ವಲಂತ ಸಾಕ್ಷಿ.

?11 ಸೊಲ್ಲಾಪುರದಲ್ಲಿ ಜಾತ್ರೆ ಸಮಯದಲ್ಲಿ ಸಿದ್ಧರಾಮೇಶ್ವರರು ಲಗ್ನವಾಗಿಲ್ಲದಿದ್ದರೂ ನಂದಿಕೋಲು ಪೂಜೆ ಯಜ್ಞ ಮಾಡಿ ನಂದಿಕೋಲಿನ ಜೊತೆ ಸಿದ್ಧರಾಮೇಶ್ವರರ ಲಗ್ನ ಮಾಡುತ್ತಾರೆ. ಏಕೆ?

* ಶರಣರು ಸ್ಥಾನಗಳೆಲ್ಲ ವೈದಿಕೀಕರಣಗೊಂಡಿವೆ. ಉದಾ: ಮಲೇ ಮಾದೇಶ್ವರ, ಎಡೆಯೂರು ಸಿದ್ಧಲಿಂಗೇಶ್ವರ, ಸೊಲ್ಲಾಪುರ ಸಿದ್ಧರಾಮೇಶ್ವರ. ಅಲ್ಲಿ ಶರಣರು ಬದುಕಿದ ರೀತಿಗೆ ವಿರುದ್ಧವಾದ ಆಚರಣೆಗಳಿವೆ. ಸೊಲ್ಲಾಪುರದಲ್ಲಿ ಅದೇ ರೀತಿ ನಡೆಯುತ್ತಿದೆ. ಈ ಬಗ್ಗೆ ಶರಣೆ.ಜಯದೇವಿ ತಾಯಿ ಲಿಗಾಡೆಯವರು ಸಹ ಬಹಳ ನೊಂದುಕೊಂಡಿದ್ದರು.



ಬೆಳಗಾವಿ ರಾಷ್ಟ್ರೀಯ ಬಸವ ದಳದವರಿಂದ ಅಣ್ಣ ಹಜಾರೆಯವರ ಸತ್ಯಾಗ್ರಹಕ್ಕೆ ಬೆಂಬಲ







ನೂತನ ರಾಷ್ಟ್ರೀಯ ಬಸವ ದಳದ ಶರಣ ಶರಣೆಯರು, ಕಡಕೋಳ, ಹಾವೇರಿ ಜಿ॥



ಪೂನಾದ ಭೋಸರಿಯಲ್ಲಿ ನಡೆದ ಶ್ರೀ ಚನ್ನಬಸವಾನಂದ ಸ್ವಾಮಿಗಳ ಶ್ರಾವಣ ಮಾಸದ ಪ್ರವಚನ ಮುಕ್ತಾಯ ಸಮಾರಂಭದಲ್ಲಿ ಧ್ವಜಾರೋಹಣ







ದಿ. 8-9-2011 ರಂದು ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ ಶ್ರೀ ಅಣ್ಣಾ ಹಜಾರೆಯವರನ್ನು ಅವರ ಸ್ವಗ್ರಾಮದಲ್ಲಿ ಭೇಟಿಯಾಗಿ, ಅಭಿನಂದಿಸಿದರು

CPMG/KA/BGW-50-/2009-2011, RNI 19980/70 POSTED AT MBC GPO ON 3,10,20 OF EVERY MONTH LICENCED TO POST WITHOUT PRE PAYMENT WPP-17, PAGER 32+4(COVER PAGES)